ಕರ್ನಾಟಕ ಸರ್ಕಾರ

*ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ*

*(ಜಿಲ್ಲಾಪಂಚಾಯತ್) ಕಡೂರು*

# ಮಾಹಿತಿ ಹಕ್ಕು ಅಧಿನಿಯಮ 2005 ಪ್ರಕರಣ 4(1)(ಬಿ)ಯ ಅಡಿಯಲ್ಲಿ ಪ್ರಕಟಿಸಲಾದ ಸ್ವಇಚ್ಛೆ ಪ್ರಕಟಣೆಯ ವಿವರಗಳು

# 2016–17

**ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ,**

**(ಜಿಲ್ಲಾ ಪಂಚಾಯಿತಿ) *ಕಡೂರು***

# “ಸಾರ್ವಜನಿಕ ಮಾಹಿತಿಗೆ ಪ್ರಕಟಣೆ”

# 2016–17

# ಮಾಹಿತಿ ಹಕ್ಕು ಅಧಿನಿಯಮ, 2005 ಪ್ರಕರಣ 4(1)(ಬಿ) ಅಡಿಯಲ್ಲಿ ಮಾಹಿತಿ ಪ್ರಕಟಣೆ

## 1. ಸಾಮಾನ್ಯ ಮಾಹಿತಿ

ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕು ನೈಸರ್ಗಿಕವಾಗಿ ಸಂಪದ್ಭರಿತ ತಾಲ್ಲೂಕಾಗಿದ್ದು ಪ್ರೇಕ್ಷಣೀಯ ಸ್ಥಳಗಳನ್ನು ಒಳಗೊಂಡಿರುತ್ತದೆ. ಈ ತಾಲ್ಲೂಕಿನ ಹೆಚ್ಚಿನ ವಿಸ್ತೀರ್ಣವು ಬಯಲು ಪ್ರದೇಶಗಳನ್ನು ಒಳಗೊಂಡಿರುವುದರಿಂದ ಬಯಲುನಾಡು ತಾಲ್ಲೂಕೆಂದೇ ಪ್ರಸಿದ್ದಿಯಾಗಿದೆ. ತಾಲ್ಲೂಕು ಕೇಂದ್ರವು ರಾಜ್ಯದ ರಾಜಧಾನಿಯಿಂದ 190 ಕಿಲೋ ಮೀಟರ್ ದೂರದಲ್ಲಿದೆ. ಕಡೂರು ತಾಲ್ಲೂಕಿನಲ್ಲಿ 8 ಹೋಬಳಿಗಳು, 60 ಗ್ರಾಮ ಪಂಚಾಯಿತಿಗಳನ್ನು ಒಳಗೊಂಡಿರುತ್ತದೆ. 2013 ರ ಜನಗಣತಿಯ ಪ್ರಕಾರ ತಾಲ್ಲೂಕು ಒಟ್ಟು 289406 ಜನ ಸಂಖ್ಯೆ ಹೊಂದಿದ್ದು, ಪುರುಷರು 146266, ಮಹಿಳೆಯರು 143140, ತಾಲ್ಲೂಕಿನ ಒಟ್ಟು ಭೌಗೋಳಿಕ ವಿಸ್ತೀರ್ಣವು 141101 ಹೆಕ್ಟೇರ್‌ಗಳಷ್ಟಿರುತ್ತದೆ. ತಾಲ್ಲೂಕಿನ ಬೇಸಾಯಕ್ಕೆ ಯೋಗ್ಯವಾದ ಜಮೀನು 68685 ಹೆಕ್ಟೇರ್‌ಗಳಷ್ಟಿರುತ್ತದೆ. ತಾಲ್ಲೂಕಿನಲ್ಲಿ ತೋಟಗಾರಿಕೆ ಬೆಳೆಗಳನ್ನು 38900 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದ್ದು, ತಾಲ್ಲೂಕಿನಲ್ಲಿ ಒಟ್ಟು 72674 ಸಂಖ್ಯೆ ಭೂ ಹಿಡುವಳಿದಾರರು ಇದ್ದು, ಇದರಲ್ಲಿ ಅತಿಸಣ್ಣ ಭೂ ಹಿಡುವಳಿದಾರರು (<1 ಹೆಕ್ಟೇರ್), 39140 ಸಂಖ್ಯೆ, ಸಣ್ಣ ಭೂ ಹಿಡುವಳಿದಾರರು (1–2 ಹೆಕ್ಟೇರ್) 20036 ಸಂಖ್ಯೆ, ಅರೆ ಮಧ್ಯಮ ಭೂ ಹಿಡುವಳಿದಾರರು (2–4 ಹೆಕ್ಟೇರ್) 9909 ಸಂಖ್ಯೆ, ಮಧ್ಯಮ ಭೂ ಹಿಡುವಳಿದಾರರು (4–10 ಹೆಕ್ಟೇರ್) 3307 ಸಂಖ್ಯೆ, ದೊಡ್ಡ ಭೂ ಹಿಡುವಳಿದಾರರ (>10 ಹೆಕ್ಟೇರ್) 282 ಸಂಖ್ಯೆಯಷ್ಟಿರುತ್ತಾರೆ.







ತಾಲ್ಲೂಕಿನಲ್ಲಿ ಭಾಗಶಃ ಮಳೆಯಾಗುವ ಪ್ರದೇಶಗಳಿದ್ದು, ತಾಲ್ಲೂಕಿನಲ್ಲಿ ವಾರ್ಷಿಕವಾಗಿ ಸರಾಸರಿ ಮಳೆಯ ಪ್ರಮಾಣ 1200 ಮಿಲಿ ಮೀಟರ್ ಇರುತ್ತದೆ.

ತಾಲ್ಲೂಕಿನ ವಾತಾವರಣವು ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಪ್ರೋತ್ಸಾಹದಾಯಕವಾಗಿರುತ್ತದೆ. ವಾತಾವರಣ ತೇವಾಂಶವು ಸೆಪ್ಟೆಂಬರ್ ತಿಂಗಳಲ್ಲಿ ಹೆಚ್ಚಾಗಿದ್ದು ಫೆಬ್ರವರಿ ತಿಂಗಳಲ್ಲಿ ಕಡಿಮೆ ಇರುತ್ತದೆ.

ತಾಲ್ಲೂಕಿನಲ್ಲಿ ತೆಂಗು, ಅಡಿಕೆ ಮತ್ತು ದಾಳಿಂಬೆ ಅತ್ಯಂತ ಪ್ರಮುಖ ವಾಣಿಜ್ಯ ಬೆಳೆಯಾಗಿದ್ದು ಈ ತಾಲ್ಲೂಕಿನಲ್ಲಿ ಅತಿ ಹೆಚ್ಚು ಪ್ರದೇಶದಲ್ಲಿ ತೆಂಗು ಬೆಳೆಯಲಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಕೃಷಿ ಆಧಾರಿತ ಉದ್ಯಮಗಳಾದ ಹಣ್ಣು ಮತ್ತು ತರಕಾರಿ ಸಂಸ್ಕರಣೆ, ತೆಂಗು ಮತ್ತು ಅಡಿಕೆ ಸಂಸ್ಕರಣೆ ಮುಂತಾದ ಉದ್ಯಮಗಳು ಹೆಚ್ಚಿನ ಮಹತ್ವ ಪಡೆದಿದೆ.

## ತಾಲ್ಲೂಕಿನ ವಿಶೇಷ ತೋಟಗಾರಿಕಾ ಬೆಳೆಗಳು

| ಬೆಳೆ | ತಳಿ |
|---|---|
| ತೆಂಗು | ತಿಪಟೂರ್ ಟಾಲ್, ಅರಸೀಕರೆ ಟಾಲ್ |
| ಅಡಿಕೆ | ತೀರ್ಥಹಳ್ಳಿ ಲೋಕಲ್ |
| ಮಾವು | ರಸಪೂರಿ, ಬಾದಾಮಿ, ಮಲ್ಲಿಕಾ, ತೋತಾಪೂರಿ, ಮಲಗೂಭ |
| ದಾಳಿಂಬೆ | ಭಗ್ವ |
| ಪಪ್ಪಾಯ | ರೆಡ್ ಪಪ್ಪಾಯ, ತೈವಾನ್ ರೆಡ್ ಲೇಡಿ. |
| ಸಪೋಟ | ಕಾಲಿಪತ್ತಿ, ಕ್ರಿಕೆಟ್ ಬಾಲ್ |
| ಬಾಳೆ | ಏಲಕ್ಕಿ ಬಾಳೆ,ತಚ ಡ್ವಾರ್ಫ್ ಕ್ಯಾವೆಂಡಿಶ್, ರೊಬಸ್ಟಾ, ನೇಸ್ಡ್ರನ್, ಜಿ–9 |

### ತಾಲ್ಲೂಕಿನಲ್ಲಿರುವ ತೋಟಗಾರಿಕಾ ಬೆಳೆಗಳ ವಿವರ:

2016-17 ನೇ ಸಾಲಿನಲ್ಲಿ ತಾಲ್ಲೂಕಿನಲ್ಲಿ 68685 ಹೆಕ್ಟೇರ್ ತೋಟಗಾರಿಕಾ ಪ್ರದೇಶ ಇರುತ್ತದೆ. ತಾಲ್ಲೂಕಿನ ನಿವ್ವಳ ಬಿತ್ತನೆ ಪ್ರದೇಶ 38900 ಹೆ. ಇದ್ದು ಶೇ.56 ರಷ್ಟು ಪ್ರದೇಶವನ್ನು ತೋಟಗಾರಿಕಾ ಬೆಳೆ ಆಕ್ರಮಿಸಿಕೊಂಡಿರುತ್ತದೆ. ವಿವಿಧ ತೋಟಗಾರಿಕಾ ಬೆಳೆಗಳ ಅಡಿ ಇರುವ ಪ್ರದೇಶಗಳ ವಿವರ ಈ ಕೆಳಗಿನ□ತಿರುತ್ತದೆ.

| ಕ್ರ.ಸಂ | ಬೆಳೆಗಳು | ವಿಸ್ತೀರ್ಣ (ಹೆ.) |
|---|---|---|
| 1 | **ಹಣ್ಣಿನ ಬೆಳೆಗಳು** | 1600 |
| 2 | **ತರಕಾರಿ ಬೆಳೆಗಳು** | 1760 |
| 3 | **ಸಾಂಬಾರು ಬೆಳೆಗಳು** | 240 |
| 4 | **ತೋಟದ ಬೆಳೆಗಳು** | 35000 |
| 5 | **ವಾಣಿಜ್ಯ ಪುಷ್ಪಗಳು** | 300 |
| | **ಒಟ್ಟು** | **38900** |

### ಕಡೂರು ತಾಲ್ಲೂಕಿನಲ್ಲಿರುವ ತೋಟಗಾರಿಕೆ ಬೆಳೆಗಳ ವಿವರಗಳು:

1 **ಕಡೂರು : ತೆಂಗು, ಅಡಿಕೆ, ಬಾಳೆ, ಮಾವು, ಪಪ್ಪಾಯ, ದಾಳಿಂಬೆ ಹೂವುಗಳು ಬೆಳೆಗಳು**

### 4. ಕಡೂರು ತಾಲ್ಲೂಕಿನ ತೋಟಗಾರಿಕಾ ಕ್ಷೇತ್ರದ ಮಾಹಿತಿ:

**ತಾಲ್ಲೂಕಿನಲ್ಲಿ ತೋಟಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿ 2 ತೋಟಗಾರಿಕೆ ಕ್ಷೇತ್ರವಿರುತ್ತದೆ (ಜಿಲ್ಲಾ ವಲಯ ಹಾಗೂ ರಾಜ್ಯವಲಯ)**

| ಕ್ರ. ಸಂ | ತೋಟಗಾರಿಕೆ ಕ್ಷೇತ್ರ/ ಸಸ್ಯಾಗಾರಗಳ ಹೆಸರುಮತ್ತು ವಿಳಾಸ | ಒಟ್ಟು ವಿಸ್ತೀರ್ಣ (ಹೆ.) | ಅಭಿವೃದ್ಧಿ ಪಡಿಸಿದ ವಿಸ್ತೀರ್ಣ (ಹೆ.) | ಅಭಿವೃದ್ಧಿ ಪಡಿಸ ಬೇಕಾಗಿ ರುವ ವಿಸ್ತೀರ್ಣ (ಹೆ) | ಮೂಲಭೂತ ಸೌಕರ್ಯ | ಸಸ್ಯಸಂಪತ್ತಿನ ವಿವರ |
|---|---|---|---|---|---|---|
| 1. | ಸಖರಾಯಪಟ್ಟಣ ತೋಟಗಾರಿಕೆ ಸಸ್ಯಾಕ್ಷೇತ್ರ | 100 ಎಕರೆ | 70 ಎಕರೆ | 30 ಎಕರೆ | ಕೊಳವೆ ಬಾವಿ–2, ದಾಸ್ತಾನು ಕೊಠಡಿ–1, ಪಂಪ್‌ಸೆಟ್–4, ಗ್ರೀನ್ ಹೌಸ್–1, ತಂತಿ ಬೇಲಿ–1 , ಪವರ್ ಲೌನ್ ವೈರಿಂಗ್ , ಎರೆಹುಳು ಘಟಕ–4, | ಸಪೋಟ–246, ಮಾವು–747, ನೆಲ್ಲಿ–185,ನೇರಳೆ–62, ಬೇಲದ ಮರ–18, ಸೀಬೆ–70, ಹುಣಸೆ–3, ಹಲಸು–28 |
| 2. | ಬಾಕಿನಕೆರೆ ತೋಟಗಾರಿಕೆ ಸಸ್ಯಾಕ್ಷೇತ್ರ ಬೀರೂರು (ಹೂ) | 25 ಎಕರೆ | 12.1/2 ಎಕರೆ | 12.1/2 ಎಕರೆ | ನೀರಿನ ಟ್ಯಾಂಕ್ 1 ಫಾರಂ ಹೌಸ್ 1 ,ಕಬ್ಬಿಣದ ಗೇಟ್–1, ಪಂಪ್ ಸೆಟ್ 1, ತಂತಿ ಬೇಲಿ 1 | ಸಪೋಟ – 45 ತೆಂಗು – 8, ಮಾವು– 178, ಬೆಟ್ಟದ ನೆಲ್ಲಿ– 110, ದಾಳಿಂಬೆ–150, ನೇರಳೆ–7, ಹಲಸು–80, |

**5. ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಜಿಲ್ಲಾ ಪಂಚಾಯಿತಿ ಕಡೂರು, ತಾಲ್ಲೂಕು ಕಛೇರಿಯ ಕಾರ್ಯಸಂಘಟನೆಯ ಪಟ್ಟಿ.**

**ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು**

↓

**ಸಹಾಯಕ ತೋಟಗಾರಿಕೆ ನಿರ್ದೇಶಕರು**

↓

**ಸಹಾಯಕ ತೋಟಗಾರಿಕಾ ಅಧಿಕಾರಿ (ತಾಂ.ಸಹಾಯಕರು)** | **ಅಧೀಕ್ಷಕರು**

ಸಹಾಯಕ ತೋಟಗಾರಿಕಾ ಅಧಿಕಾರಿ

↓

ತೋಟಗಾರಿಕೆ ಸಹಾಯಕರು

↓

ಮುಖ್ಯ ತೋಟಗಾರ

↓

ತೋಟಗಾರ

ಪ್ರಥಮ ದರ್ಜೆ ಸಹಾಯಕರು

↓

ದ್ವಿತೀಯ ದರ್ಜೆ ಸಹಾಯಕರು

**<u>ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ, ಕಡೂರು ತಾಲ್ಲೂಕಿನ ತೋಟಗಾರಿಕೆ ಇಲಾಖೆಯಲ್ಲಿ ಮಂಜೂರಾಗಿರುವ ಹಾಗೂ ಖಾಲಿ ಇರುವ ಹುದ್ದೆಗಳ ವಿವರ</u>**

| ಕ್ರ.ಸಂ | ಪದನಾಮ | ವೇತನ ಶ್ರೇಣಿ | ಮಂಜೂರಾದ ಹುದ್ದೆಗಳ ಸಂಖ್ಯೆ | ಭರ್ತಿ ಇರುವ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|---|---|
| 1 | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು | 28100–50100 | 1 | 1 | 0 |
| 2 | ಸಹಾಯಕ ತೋಟಗಾರಿಕೆ ನಿರ್ದೇಶಕರು | 22800–45300 | 1 | 0 | 1 |
| 3 | ಸಹಾಯಕ ತೋಟಗಾರಿಕೆ ಅಧಿಕಾರಿಗಳು | 21600–40050 | 9 | 5 | 4 |
| 4 | ತೋಟಗಾರಿಕೆ ಸಹಾಯಕರು | 12500–24000 | 3 | 3 | 0 |
| 5 | ಅದೀಕ್ಷಕರು | 20000–36300 | 1 | 1 | 0 |
| 6 | ಪ್ರಥಮ ದರ್ಜೆ ಸಹಾಯಕರು | 14550–26700 | 1 | 0 | 1 |
| 7 | ದ್ವಿತೀಯ ದರ್ಜೆ ಸಹಾಯಕರು | 11600–21000 | 1 | 1 | 0 |
| 8 | ಮುಖ್ಯ ತೋಟಗಾರ | | 1 | 0 | 1 |
| 9 | ತೋಟಗಾರ | 9600–14550 | 1 | 1 | 0 |
| | ಒಟ್ಟು | | 19 | 12 | 7 |

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಕಛೇರಿಯ ಮೇಲು ಉಸ್ತುವಾರಿ ನಡೆಸುತ್ತಾರೆ. ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿಯಲ್ಲಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಮುಖ್ಯಸ್ಥರಾಗಿದ್ದು, ಒರ್ವ ಸಹಾಯಕ ತೋಟಗಾರಿಕೆ ನಿರ್ದೇಶಕರು, ಒಟ್ಟು 09 ಜನ ಸಹಾಯಕ ತೋಟಗಾರಿಕೆ

ಅಧಿಕಾರಿಗಳು, , 3 ಜನ ತೋಟಗಾರಿಕೆ ಸಹಾಯಕರು, ಅದೀಕ್ಷಕರು 1, ಒರ್ವ ಪ್ರಥಮ ದರ್ಜೆ ಹಾಗೂ ದ್ವಿತಿಯ ದರ್ಜೆ ಹುದ್ದೆಗಳು ಇರುತ್ತವೆ. ಓರ್ವ ಮುಖ್ಯ ತೋಟಗಾರ ಮತ್ತು ತೋಟಗಾರ ಹುದ್ದೆ ಇರುತ್ತದೆ.

ಹಾಲಿ ಈ ಕಛೇರಿಯಲ್ಲಿ ಒಬ್ಬ ಹಿರಿ ಯ ಸಹಾಯಕ ತೋಟಗಾರಿಕೆ ನಿರ್ದೇಶಕರು, 05 ಜನ ಸಹಾಯಕ ತೋಟಗಾರಿಕೆ ಅಧಿಕಾರಿಗಳು, ಒಬ್ಬರು ಅಧೀಕ್ಷಕರು, 03 ಜನ ತೋಟಗಾರಿಕೆ ಸಹಾಯಕರು, ಹಾಗೂ ಒಬ್ಬ ತೋಟಗಾರ, ಅಧಿಕಾರಿ/ಸಿಬ್ಬಂಧಿ ವರ್ಗ ಕಾರ್ಯನಿರ್ವಹಿಸುತ್ತಿರುತ್ತಾರೆ.

**7. ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿಯ ಕಾರ್ಯಗಳು ಮತ್ತು ಕರ್ತವ್ಯಗಳು ಈ ಕೆಳಕಂಡಂತೆ ಇರುತ್ತವೆ.**

**ಸಾಮಾನ್ಯ ಕಾರ್ಯಗಳು:**

1. ತಾಲ್ಲೂಕು ತೋಟಗಾರಿಕೆ ಇಲಾಖೆಯ ತಾಲ್ಲೂಕಿನ ಕಛೇರಿಯಾಗಿದ್ದು ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದ ಆಡಳಿತ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಅನುಷ್ಟಾನಗೊಳಿಸುವುದು.
2. ಕಾಲ ಕಾಲಕ್ಕೆ ಅಧೀನ ಅಧಿಕಾರಿಗಳಿಗೆ ಇಲಾಖಾ ಚಟುವಟಿಕೆಗಳ ಬಗ್ಗೆ ಅಗತ್ಯ ಸಲಹೆ ಸೂಚನೆಗಳನ್ನು ನೀಡುವುದು
3. ತಾಲ್ಲೂಕಿನ ತೋಟಗಾರಿಕೆ ಬೆಳೆಗಾರರ ಅವಶ್ಯಕತೆಗಳಿಗೆ ತಕ್ಕಂತೆ ಯೋಜನೆಗಳನ್ನು ರೂಪಿಸುವುದು.
4. ತೋಟಗಾರಿಕೆ ಇಲಾಖೆಯಿಂದ ಅನುಷ್ಟಾನಗೊಳಿಸಲಾಗುತ್ತಿರುವ ವಿವಿಧ ಯೋಜನೆಗಳನ್ನು ಹೋಬಳಿವಾರು ಹಂಚಿಕೆ ಮಾಡಿ ಸಮರ್ಪಕವಾಗಿ ಅನುಷ್ಟಾನಗೊಳಿಸುವುದು.
5. ಅಧೀನ ಕಛೇರಿಗಳು ಸಮರ್ಪಕವಾಗಿ ಕೆಲಸ ನಿರ್ವಹಿಸಲು ಅವಶ್ಯಕವಿರುವ ಮಾರ್ಗದರ್ಶನ ನೀಡುವುದು.
6. ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿಗಳ ಸರ್ವತೋಮುಖ ಅಭಿವೃದ್ಧಿ ಪಡಿಸಲು ಅವಶ್ಯವಿರುವ ಮಾರ್ಗದರ್ಶನ ನೀಡುವುದು.
7. ಯೋಜನೆ /ಯೋಜನೇತರ ಬಿಲ್ಲುಗಳನ್ನು ತಯಾರಿಸಿ ತೋಟಗಾರಿಕೆ ಉಪನಿರ್ದೇಶಕರಿಗೆ ಮೇಲುಸಹಿಗಾಗಿ ಮಂಡಿಸುವುದು.
8. ತಾಲ್ಲೂಕು ತೋಟಗಾರಿಕಾ ಫಲಾನುಭವಿಗಳ ತಾಕು ಪರಿಶೀಲನೆ ಮತ್ತು ರೈತ ಸಂಪರ್ಕ ಕೇಂದ್ರ ಕಛೇರಿಗೆ ಪರಿಶೀಲನೆ ನಡೆಸುವುದು.
9. ತಾಲ್ಲೂಕು ಮಟ್ಟದಲ್ಲಿ ವಿವಿಧ ಯೋಜನೆಗಳ ಅನುಷ್ಟಾನ ಮತ್ತು ಪ್ರಗತಿಯ ಪರಿಶೀಲನೆ ಮಾಡಿ ಕ್ರೋಢಿಕೃತ ಪ್ರಗತಿ ವರದಿಯನ್ನು ತಯಾರಿಸಿ ಜಿಲ್ಲಾ ಮಟ್ಟಕ್ಕೆ ಸಲ್ಲಿಸುವುದು.
10. ವಿಶೇಷ ಯೋಜನೆಗಳ ಅನುಷ್ಟಾನಕ್ಕೆ ಅವಶ್ಯವಿರುವ ತಾಲ್ಲೂಕು ಮಟ್ಟದ ಸಮಿತಿಗಳ ಸದಸ್ಯ ಕಾರ್ಯದರ್ಶಿ/ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವುದು.
11. ತಾಲ್ಲೂಕು ಮಟ್ಟದ ಪ್ರಗತಿ ಪರಿಶೀಲನಾ ಸಭೆಗಳಿಗೆ ಇಲಾಖೆಯ ಪ್ರತಿನಿಧಿಯಾಗಿ ಭಾಗವಹಿಸುವುದು.
12. ಪ್ರಕೃತಿ ವಿಕೋಪ ಸಂಭವಿಸಿದ ಸಮಯದಲ್ಲಿ ಆಗಿರುವ ಹಾನಿಯ ಅಂದಾಜನ್ನು ಪರಿಶೀಲಿಸಿ ಪ್ರಕೃತಿ ವಿಕೋಪ ಪರಿಹಾರ ನಿಧಿಯಡಿ ಸಹಾಯಧನಕ್ಕೆ ಕಂದಾಯ ಇಲಾಖೆಗೆ ಶಿಪಾರಸ್ಸು ಮಾಡುವುದು.

**ವಿಸ್ತರಣೆ ಮತ್ತು ತರಬೇತಿ:**

1. ತೋಟಗಾರಿಕೆ ಇಲಾಖೆಯಿಂದ ಅನುಷ್ಟಾನಗೊಳಿಸುತ್ತಿರುವ ವಿವಿಧ ಯೋಜನೆಗಳ ಕುರಿತು ರೈತರಿಗೆ ಹಾಗೂ ಸಾರ್ವಜನಿಕರಿಗೆ ಮಾಹಿತಿ ನೀಡುವುದು.
2. ತೋಟಗಾರಿಕೆ ಬೆಳೆಗಳ ಬೇಸಾಯ, ನಿರ್ವಹಣೆ, ಕೊಯ್ಲು, ಸಂಸ್ಕರಣೆ ಕುರಿತು ರೈತರಿಗೆ ತರಬೇತಿ ನೀಡುವುದು.
3. ತೋಟಗಾರಿಕೆಯಲ್ಲಿ ಸಾವಯವ ಕೃಷಿ, ಜೇನು ಕೃಷಿ ಮುಂತಾದ ಅವಶ್ಯಕ ಹೊಸ ತಂತ್ರಜ್ಞಾನಗಳನ್ನು ರೈತರಿಗೆ ತರಬೇತಿ, ವಿಚಾರ ಸಂಕೀರ್ಣ, ಕಾರ್ಯಾಗಾರ ಮತ್ತು ಜಾಗೃತಿ ಶಿಬಿರ ಮುಂತಾದವುಗಳನ್ನು ಏರ್ಪಡಿಸುವ ಮೂಲಕ ಮಾಹಿತಿ ಒದಗಿಸುವುದು.

4. ತೋಟಗಾರಿಕೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಹೊಸ ಹೊಸ ಯೋಜನೆಗಳ ಮಾಹಿತಿಯನ್ನು ಪತ್ರಿಕೆ, ಆಕಾಶವಾಣಿ, ದೂರದರ್ಶನ ಮುಂತಾದ ಸಮೂಹ ಮಾಧ್ಯಮಗಳ ಮೂಲಕ ರೈತರಿಗೆ ತಲುಪುವಂತೆ ಮಾಡುವುದು.
5. ಕೃಷಿ ವಿಜ್ಞಾನ ಕೇಂದ್ರ, ಕೃಷಿ ಸಂಶೋಧನಾ ಕೇಂದ್ರ, ಕೃಷಿ ವಿಶ್ವವಿದ್ಯಾಲಯ, ತೋಟಗಾರಿಕೆ ಮಹಾವಿದ್ಯಾಲಯ ಮುಂತಾದ ಕೃಷಿ ಆಧಾರಿತ ಸಂಶೋಧನಾ ಕೇಂದ್ರಗಳಿಂದ ವಿವಿಧ ಹೊಸ ತಂತ್ರಜ್ಞಾನಗಳನ್ನು ರೈತರ ತೋಟಗಳಿಗೆ ತಲುಪಿಸುವಂತೆ ಕ್ರಮ ಕೈಗೊಳ್ಳುವುದು.
6. ರೈತರ ಮಕ್ಕಳಿಗೆ, ರೈತರಿಗೆ, ರೈತ ಮಹಿಳೆಯರಿಗೆ ತರಬೇತಿ ನೀಡಲು ತಾಲ್ಲೂಕು ಅಧಿಕಾರಿಗಳಿಗೆ ಮಾರ್ಗದರ್ಶನ ನೀಡುವುದು
7. ರೈತರನ್ನು ರಾಜ್ಯ ಮತ್ತು ಹೊರ ರಾಜ್ಯಗಳ ಉತ್ತಮ ಪ್ರಗತಿಪರ ರೈತರ ತೋಟ, ಸಂಶೋದನಾ ಕೇಂದ್ರಗಳಿಗೆ ಪ್ರವಾಸ ಕೈಗೊಂಡು ರೈತರ ಜ್ಞಾನ ವರ್ಧನೆಗೆ ಸಹಕರಿಸುವುದು.

**ಸಸ್ಯಾಭಿವೃದ್ಧಿ:**

1. ಉತ್ತಮ ಗುಣಮಟ್ಟದ ಜಿಲ್ಲೆಯ ವಾತಾವರಣಕ್ಕೆ ಹೊಂದುವ ತಳಿಗಳನ್ನು ಗುರುತಿಸಿ ಅಭಿವೃದ್ಧಿಗೊಳಿಸುವುದು.
2. ಇಲಾಖೆಯ ತೋಟಗಾರಿಕೆ ಕ್ಷೇತ್ರಗಳಿಂದ, ಸಾರ್ವಜನಿಕ ವಲಯದ ನರ್ಸರಿಗಳಿಂದ, ಖಾಸಗಿ ವಲಯದ ನರ್ಸರಿಗಳಿಂದ ಉತ್ತಮ ಗುಣಮಟ್ಟದ ಕಸಿ/ಸಸಿಗಳನ್ನು ಉತ್ಪಾದಿಸಲು ಕ್ರಮ ಕೈಗೊಳ್ಳುವುದು.
3. ಉತ್ತಮ ಗುಣಮಟ್ಟದ ಕಸಿ/ಸಸಿಗಳು ಅವಶ್ಯಕ ಪ್ರಮಾಣದಲ್ಲಿ ಸಾರ್ವಜನಿಕ ವಲಯದಲ್ಲಿ ಲಭ್ಯವಿಲ್ಲದಿದ್ದ ಸಮಯದಲ್ಲಿ ಖಾಸಗಿ ವಲಯದ ನರ್ಸರಿಗಳಿಂದ ಕರ್ನಾಟಕ ಪಾರದರ್ಶಕ ನಿಯಮಾವಳಿಗಳ ಮೂಲಕ ಪಡೆದು ರೈತರಿಗೆ ಒದಗಿಸುವ ವ್ಯವಸ್ಥೆ ಮಾಡುವುದು.
4. ತಾಲ್ಲೂಕಿನ ವಿಶೇಷ ತೋಟಗಾರಿಕೆ ಬೆಳೆಗಳ ಸಂರಕ್ಷಣೆ ಮತ್ತು ಅಭಿವೃದ್ಧಿಗೆ ಕ್ರಮ ಕೈಗೊಳ್ಳವುದು.
5. ತಾಲ್ಲೂಕಿನ ಆಯಾ ಪ್ರದೇಶಗಳ ಬೇಡಿಕೆಗೆ ಅನುಗುಣವಾಗಿ ವಿವಿಧ ಯೋಜನೆಗಳಡಿಯಲ್ಲಿ ವಿವಿಧ ಬೆಳೆಗಳ ಸಸ್ಯಾಭಿವೃದ್ಧಿ ಕಾರ್ಯಕ್ರಮಕ್ಕೆ ಗುರಿಗಳನ್ನು ನಿಗದಿಪಡಿಸುವುದು ಮತ್ತು ಅನುಷ್ಠಾನಗೊಳಿಸುವುದು.

**ಪ್ರದೇಶ ವಿಸ್ತರಣೆ**

1. ಜಿಲ್ಲೆಯ ವಾತಾವರಣಕ್ಕೆ ಸೂಕ್ತವಾದ ತಳಿಗಳನ್ನು ಆಯ್ಕೆ ಮಾಡಿ ಅವುಗಳ ಪ್ರದೇಶ ವಿಸ್ತರಣೆ ಕೈಗೊಳ್ಳುವುದು.
2. ಆಯಾ ಪ್ರದೇಶಗಳಿಗೆ ಸೂಕ್ತವಾದ ಬೆಳೆಗಳನ್ನು ಮತ್ತು ತಳಿಗಳನ್ನು ಆಯ್ಕೆ ಮಾಡಿ ಯೋಗ್ಯ ಫಲಾನುಭವಿಗಳಿಂದ ಪ್ರದೇಶ ವಿಸ್ತರಣೆ ಕೈಗೊಳ್ಳುವುದು.
3. ಹಣ್ಣು, ತರಕಾರಿ, ಹೂವಿನ ಬೆಳೆಗಳು, ತೋಟದ ಬೆಳೆಗಳು, ಸಂಬಾರು ಬೆಳೆಗಳು, ಔಷಧಿ ಬೆಳೆಗಳು, ಸುಗಂಧದ್ರವ್ಯ ಬೆಳೆಗಳ ಪ್ರದೇಶ ವಿಸ್ತರಣೆಗೆ ಯೋಗ್ಯವಾದ ಪರಿಸರವನ್ನು ಆಯ್ಕೆ ಮಾಡಿ ಅಲ್ಲಿನ ರೈತರಿಗೆ ಸದರಿ ಬೆಳೆಗಳ ಪ್ರದೇಶ ವಿಸ್ತರಣೆಗೆ ಪ್ರೋತ್ಸಾಹಿಸುವುದು.
4. ತೋಟಗಾರಿಕಾ ಬೆಳೆಗಳ ಹೊಸ ತಳಿಗಳನ್ನು ಪರಿಚಯಿಸುವುದು.
5. ವಿನಾಶದ ಅಂಚಿನಲ್ಲಿರುವ ತೋಟಗಾರಿಕೆ ಬೆಳೆಗಳ ಸಂರಕ್ಷಣೆ ಮತ್ತು ಅಭಿವೃದ್ಧಿ ಪಡಿಸುವುದು.

**ನೀರಿನ ಮೂಲಗಳ ನಿರ್ಮಾಣ**

1. ತೋಟಗಾರಿಕೆ ಬೆಳೆಗಳಿಗೆ ಅವಶ್ಯಕತೆಯಿರುವ ಪ್ರಮಾಣದಲ್ಲಿ ನೀರಾವರಿ ಸೌಲಭ್ಯ ಒದಗಿಸಲು ಬೇಕಾದ ಸಮುದಾಯ ಕೆರೆಗಳನ್ನು ಮತ್ತು ಕೃಷಿ ಹೊಂಡಗಳನ್ನು ನಿರ್ಮಿಸಲು ರೈತರನ್ನು ಪ್ರೋತ್ಸಾಹಿಸುವುದು.

2. ವೈಜ್ಞಾನಿಕ ಪದ್ಧತಿಯಲ್ಲಿ ಬೆಳೆಗಳಿಗೆ ಸಾಕಾಗುವ ಪ್ರಮಾಣದ ನೀರನ್ನು ಸಂಗ್ರಹಿಸಿಟ್ಟುಕೊಳ್ಳಲು ಅವಶ್ಯಕತೆಗೆ ತಕ್ಕಂತೆ ಸಮುದಾಯ ಕೆರೆಗಳನ್ನು ಮತ್ತು ಕೃಷಿ ಹೊಂಡಗಳನ್ನು ನಿರ್ಮಿಸಲು ಸಹಾಯಧನ ಒದಗಿಸುವುದು.

**ರಕ್ಷಿತ ಬೇಸಾಯ**

1. ತೋಟಗಾರಿಕೆ ಬೆಳೆಗಳಿಗೆ ಅವಶ್ಯಕವಿರುವ ಹಸಿರುಮನೆ ಮತ್ತು ಪಾಲಿ ಮನೆಗಳ ನಿರ್ಮಾಣಕ್ಕೆ ರೈತರನ್ನು ಪ್ರೋತ್ಸಾಹಿಸುವುದು.
2. ಶೇಡ್ ನೆಟ್ ನಿರ್ಮಾಣಕ್ಕೆ ಪ್ರೋತ್ಸಾಹಿಸುವುದು.
3. ಹೊಸ ಹೊಸ ಬೆಳೆಗಳನ್ನು ಸಂರಕ್ಷಿತ ಬೇಸಾಯದಲ್ಲಿ ಬೆಳೆಯಲು ಪ್ರೋತ್ಸಾಹಿಸುವುದು.

**ಸಮಗ್ರ ಪೋಷಕಾಂಶ ಹಾಗೂ ಸಮಗ್ರ ಪೀಡೆ ನಿರ್ವಹಣೆ**

1. ತೋಟಗಾರಿಕೆ ಬೆಳೆಗಳಿಗೆ ಅವಶ್ಯವಿರುವ ಪೋಷಕಾಂಶಗಳ ನಿರ್ವಹಣೆ ಮಾಡಲು ಬೇಕಾದ ಜೈವಿಕ ಗೊಬ್ಬರಗಳನ್ನು ರಿಯಾಯಿತಿ ದರದಲ್ಲಿ ರೈತರಿಗೆ ಒದಗಿಸುವ ವ್ಯವಸ್ಥೆ ಮಾಡುವುದು.
2. ಮಣ್ಣಿನ ರಸಸಾರ ನಿರ್ವಹಣೆಗೆ ಅವಶ್ಯವಾದ ಸುಣ್ಣ / ಜಿಪ್ಸಂ ಬಳಸಲು ಪ್ರೋತ್ಸಾಹಿಸುವುದು.
3. ಹಸಿರೆಲೆ ಗೊಬ್ಬರಗಳ ಮಹತ್ವವನ್ನು ರೈತರಿಗೆ ಮನದಟ್ಟು ಮಾಡಿ ಬಳಕೆಯನ್ನು ಪ್ರೋತ್ಸಾಹಿಸುವುದು.
4. ಜೈವಿಕ ಪದ್ದತಿಯಲ್ಲಿ ರೋಗ ಮತ್ತು ಕೀಟಗಳ ನಿಯಂತ್ರಣ ಪದ್ದತಿಗೆ ಪ್ರೋತ್ಸಾಹಿಸುವುದು.
5. ಬೋರ್ಡೋ ಮಿಶ್ರಣ, ಜೈವಿಕ ಕೀಟನಾಶಕಗಳು, ಸಮ್ಮೋಹಕ ಬಲೆಗಳ ಬಳಕೆಗೆ ಸಹಾಯಧನ ಒದಗಿಸುವುದು

**ಸಾವಯವ ಕೃಷಿ**

1. ಸ್ಥಳಿಯವಾಗಿ ಲಭ್ಯವಿರುವ ಕೃಷಿ ತ್ಯಾಜ್ಯ ವಸ್ತುಗಳನ್ನು ಬಳಸಿಕೊಂಡು ಅತಿ ಕಡಿಮೆ ಖರ್ಚಿನಲ್ಲಿ ಎರೆಹುಳು ಗೊಬ್ಬರ, ಬಯೋಡೈಜೆಸ್ಟರ್‌ಗಳನ್ನು ನಿರ್ಮಿಸಲು ಪ್ರೋತ್ಸಾಹಿಸುವುದು.
2. ಸಾವಯವ ಪರಿವರ್ತನೆಗೆ ರೈತರನ್ನು ಪ್ರೋತ್ಸಾಹಿಸುವುದು.
3. ಸಾವಯವ ಕೃಷಿ ದೃಡೀಕರಣ ವ್ಯವಸ್ಥೆ ಹೊಂದಲು ಪ್ರೋತ್ಸಾಹಿಸುವುದು.
4. ಸಾವಯವ ಕೃಷಿ ಅಳವಡಿಕೆ ಕುರಿತು ಸರ್ವೀಸ್ ಪ್ರೊವೈಡರ್‌ಗಳು, ಸಾವಯವ ಕೃಷಿಕರಿಗೆ, ಇಲಾಖಾ ವಿಸ್ತರಣಾಧಿಕಾರಿಗಳಿಗೆ ತರಬೇತಿ ನೀಡುವ ವ್ಯವಸ್ಥೆ ಮಾಡುವುದು.
5. ಇಲಾಖೆಯ ತೋಟಗಾರಿಕೆ ಕ್ಷೇತ್ರಗಳಲ್ಲಿ ಮಾದರಿ ಸಾವಯವ ತೋಟ ನಿರ್ಮಾಣ ಮಾಡಿಸುವುದು.

**ಜೇನು ಕೃಷಿ**

1. ರೈತರ ತೋಟಗಳಲ್ಲಿ ಜೇನು ಸಾಕಣೆಗೆ ಪ್ರೋತ್ಸಾಹಿಸುವುದು.
2. ಜೇನು ಸಾಕಣಿಕೆ ಸೊಸೈಟಿಗಳ ಮೂಲಕ ರೈತರಿಗೆ ತರಬೇತಿ ಏರ್ಪಡಿಸುವುದು.
3. ರೈತರ ತೋಟಗಳ ಬೆಳೆಗಳಲ್ಲಿನ ಪರಾಗಸ್ಪರ್ಶ ಹೆಚ್ಚಳದಲ್ಲಿ ಜೇನು ಹುಳಗಳ ಪಾತ್ರದ ಬಗ್ಗೆ ರೈತರಿಗೆ ಅರಿವು ಮೂಡಿಸುವುದು.

**ಕೊಯ್ಲೋತ್ತರ ನಿರ್ವಹಣೆ**

1. ತೋಟಗಾರಿಕೆ ಬೆಳೆಗಳಾದ ಹಣ್ಣು, ತರಕಾರಿ, ತೋಟದ ಬೆಳೆಗಳು, ಔಷಧಿ ಸಸ್ಯಗಳು ಮತ್ತು ಸುಗಂಧ ದ್ರವ್ಯ ಬೆಳೆಗಳ ಕೊಯ್ಲೋತ್ತರ ನಿರ್ವಹಣೆಗೆ ಪ್ರೋತ್ಸಾಹಿಸುವುದು.
2. ತೋಟಗಾರಿಕೆ ಬೆಳೆಗಳ ಅವಶ್ಯಕತೆಗೆ ತಕ್ಕಂತೆ ಪ್ಯಾಕ್ ಹೌಸ್‌ಗಳ ನಿರ್ಮಾಣಕ್ಕೆ ಪ್ರೋತ್ಸಾಹಿಸುವುದು.
3. ಶೀತಲ ಗೃಹ ನಿರ್ಮಾಣಕ್ಕೆ ಪ್ರೋತ್ಸಾಹಿಸುವುದು.
4. ತೋಟಗಾರಿಕೆ ಬೆಳೆಗಳ ಪ್ರಾಥಮಿಕ ಸಂಸ್ಕರಣಾ ಘಟಕ ನಿರ್ಮಾಣಕ್ಕೆ ಪ್ರೋತ್ಸಾಹ ನೀಡುವುದು.

**ತೋಟಗಾರಿಕೆ ಬೆಳೆಗಳಿಗೆ ಮಾರುಕಟ್ಟೆ ಅಭಿವೃಧ್ಧಿ**

1. ಮಾರುಕಟ್ಟೆಯಲ್ಲಿ ನಿರತರಾದ ಸಂಸ್ಥೆಗಳಾದ ಹಾಪ್‌ಕಾಮ್ಸ್, ತಾಲ್ಲೂಕು ತೋಟಗಾರಿಕೆ ಬೆಳೆಗಾರರ ಸಂಘಗಳು, ಎಪಿಎಂಸಿ ಹಾಗೂ ಸರ್ಕಾರೇತರ ಸಂಘ ಸಂಸ್ಥೆಗಳಿಗೆ ಸಗಟು ಮಾರುಕಟ್ಟೆ ಅಭಿವೃದ್ಧಿಗೆ ಸಹಾಯಧನ ಒದಗಿಸುವುದು.
2. ಗ್ರಾಮೀಣ ಮಾರುಕಟ್ಟೆ, ರೈತ ಸಂತೆ, ನೇರ ಮಾರುಕಟ್ಟೆ ನಿರ್ಮಾಣಕ್ಕೆ ಪ್ರೋತ್ಸಾಹಿಸುವುದು.
3. ತೋಟಗಾರಿಕೆ ಬೆಳೆಗಳ ಬೆಂಬಲ ಬೆಲೆ ಯೋಜನೆಯಡಿ ಖರೀದಿಯ ಸಮಯದಲ್ಲಿ ತಾಂತ್ರಿಕ ದೃಡೀಕರಣಕ್ಕೆ ಮೇಲಧಿಕಾರಿಗಳ ಸಲಹೆಯಂತೆ ಕ್ರಮ ಕೈಗೊಳ್ಳುವುದು

**ಇತರೆ ಕಾರ್ಯಗಳು:**

1. ಜಿಲ್ಲೆಯ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ತೋಟಗಾರಿಕೆ ಉಪ ನಿರ್ದೇಶಕರು, ಮತ್ತಿತರ ಮೇಲಾಧಿಕಾರಿಗಳು ಸೂಚಿಸುವ ವಿಶೇಷ ಕೆಲಸಗಳನ್ನು ನಿರ್ವಹಿಸುವುದು.
2. ಜನಸ್ಪಂದನಾ ಸಭೆ ಮುಂತಾದ ಸಭೆಗಳಿಗೆ ಹಾಜರಾಗಿ ಸಾರ್ವಜನಿಕರಿಗೆ ಮಾಹಿತಿ ನೀಡುವುದು
3. ಪ್ರಕೃತಿ ವಿಕೋಪ ಮುಂತಾದ ಸಮಯಗಳಲ್ಲಿ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಕೆಲಸ ನಿರ್ವಹಿಸುವುದು.

**4. ಇನ್ನಿತರೆ ಕಾಲಕಾಲಕ್ಕೆ ಸೂಚಿಸಲಾಗುವ ವಿಶೇಷ ಕಾರ್ಯ ನಿರ್ವಹಿಸುವುದು**

**4 : (II) ಅಧಿಕಾರಿ/ ನೌಕರರುಗಳ ಅಧಿಕಾರ ಮತ್ತು ಕತ9ವ್ಯಗಳು**

| | |
|---|---|
| **ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು** | ತಾಲ್ಲೂಕಿನ ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ ರಾಜ್ಯ ವಲಯ ಮತ್ತು ಜಿಲ್ಲಾ ವಲಯ ಹಾಗೂ ಎನ್.ಎಚ್.ಎಂ. ಯೋಜನೆಗಳಿಗೆ ಸಂಬಂಧಿಸಿದಂತೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಹುದ್ದೆಗೆ ಸಂಬಂಧಿಸಿದ ಅಧಿಕಾರ ವ್ಯಾಪ್ತಿಯೊಳಗೆ ಅಭಿವೃದ್ಧಿ ಹಾಗೂ ಆಡಳಿತ ಕೆಲಸ ನಿರ್ವಹಿಸುವುದು, ಅಧಿಕಾರ ಮೀರಿದ ಪ್ರಸ್ತಾವನೆಗಳನ್ನು ಮೇಲಾಧಿಕಾರಿಗಳಿಗೆ ಸಲ್ಲಿಸುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |
| **ಸಹಾಯಕ ತೋಟಗಾರಿಕೆ ನಿರ್ದೇಶಕರು** | ಎಲ್ಲಾ ಶಾಖೆಗಳ ಸಂಬಂಧಿಸಿದಂತೆ ತಾಂತ್ರಿಕ ಸಹಾಯಕರು ಸಲ್ಲಿಸುವ ಕಡತಗಳನ್ನು ಪರಿಶೀಲಿಸಿ ಮಂಡಿಸುವುದು. ಪ್ರಮುಖ ವಿಷಯಗಳನ್ನು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರವರೊಂದಿಗೆ ಚರ್ಚಿಸಿ ತಮ್ಮ ಅಧೀನ ಸಿಬ್ಬಂಧಿಗಳೊಂದಿಗೆ ಕಡತವನ್ನು ಶೀಘ್ರವಾಗಿ ಇತ್ಯರ್ಥಪಡಿಸಲು ಕ್ರಮವಹಿಸುವುದು, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಅನುಪಸ್ಥಿತಿಯಲ್ಲಿ ಕಛೇರಿ ದೈನಂದಿನ ಕೆಲಸಗಳ ನಿರ್ವಹಣೆ ಹಾಗೂ ಸಭೆಗಳಿಗೆ ಹಾಜರಾಗುವುದು. ಸಹಾಯಕ ತೋಟಗಾರಿಕೆ ಅಧಿಕಾರಿಗಳ ಕಡತಗಳ ತಪಾಸಣೆ ಕೈಗೊಳ್ಳುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |
| **ಸಹಾಯಕ ತೋಟಗಾರಿಕೆ ಅಧಿಕಾರಿಗಳು** | ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಗೆ ಸಂಬಂಧಪಟ್ಟ ಎಲ್ಲಾ ಶಾಖೆಗಳ ಕಡತಗಳನ್ನು ಪರಿಶೀಲಿಸಿ ಮಂಡಿಸುವುದು. ಪ್ರಮುಖ ವಿಷಯಗಳನ್ನು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರೊಂದಿಗೆ ಚರ್ಚಿಸಿ ಅಧೀನ ಮುಖ್ಯಾಧಿಕಾರಿಗಳೊಂದಿಗೆ ಕಡತಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸುವುದು. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಗೆ ಸಂಬಂಧಿಸಿದ ಫಲಾನುಭವಿಗಳ ತೋಟಕ್ಕೆ ಭೇಟಿ ನೀಡಿ ಪರಿಶೀಲಿಸುವುದು. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಗೆ ಸಂಬಂಧಪಟ್ಟ ಪ್ರಗತಿ ವರದಿಗಳನ್ನು ತಯಾರಿಸುವುದು. ಪ್ರಗತಿ ವರದಿಯನ್ನು ರಾಷ್ಟ್ರೀಯ ತೋಟಗಾರಿಕೆ ಮಿಷನ್ ವೆಬ್‌ಸೈಟ್‌ನಲ್ಲಿ ದಾಖಲಿಸುವುದು. ಮೇಲಧಿಕಾರಿಗಳು ಕಾಲಕಾಲಕ್ಕೆ ಕೇಳಲಾಗುವ ಮಾಹಿತಿಯನ್ನು ತಯಾರಿಸಿ ಸಲ್ಲಿಸುವುದು. ಸಂಬಂಧಪಟ್ಟ ರೈತ ಸಂಪರ್ಕ ಕೇಂದ್ರಕ್ಕೆ ಭೇಟಿ ನೀಡುವುದು ರಾ.ತೋ.ಮಿ., ರಾಜ್ಯ ವಲಯ, ತಾಲ್ಲೂಕು ಪಂಚಾಯಿತಿ ಯೋಜನೆ ತಾಕುಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡುವುದು ಹಾಗೂ ಹನಿ ನೀರಾವರಿ ಕಡಗಳನ್ನು ಪರಿಸೀಲಿಸಿ ಮಂಡಿಸುವುದು ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |

| | |
|---|---|
| **ಅಧೀಕ್ಷಕರು** | ಆಡಳಿತ ಶಾಖೆಗೆ ಸಂಬಂಧಿಸಿದ ಮೇಲು ಉಸ್ತುವಾರಿ ಹಾಗೂ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಆದೇಶದಂತೆ ಕಾರ್ಯ ನಿರ್ವಹಿಸುವುದು. |
| **ಪ್ರ.ದ.ಸ.:** | ಹಂಚಿಕೆಯಾದ ವಿಷಯವನ್ನು ಸಮರ್ಪಕವಾಗಿ ನಿಯಮಗಳನ್ವಯ ಪರಿಶೀಲಿಸಿ ಕಡತ ರಚಿಸಿ ಕಛೇರಿ ಕೈಪಿಡಿ ನಿಯಮಗಳ ಪ್ರಕಾರ ಮುಂದಿನ ಆದೇಶ ಕೋರಿ ಕಡತ ಮಂಡಿಸುವುದು ನಗಧು ಹಾಗೂ ನಗದು ಪುಸ್ತಕಗಳ ನಿರ್ವಹಣೆ, ಜಿಲ್ಲಾ ವಲಯ, ರಾಜ್ಯವಲಯ ಹಾಗೂ ಇತರ ವಿಶೇಷ ಯೋಜನೆಗಳ ತಾಲೂಕು ಮಟ್ಟದ ಕಛೇರಿಗಳ ಬಿಲ್ಲುಗಳನ್ನು ಪರಿಶೀಲಿಸಿ ಮೇಲು ಸಹಿಗೆ ಮಂಡಿಸುವುದು, ಮಂಜೂರಾತಿ ಕ್ರಮವಹಿಸುವುದು, ಸದರಿ ಯೋಜನೆಗಳ ಅನುದಾನ ಬಿಡುಗಡೆ ಬಗ್ಗೆ ಕ್ರಮವಹಿಸುವುದು ಸರ್ಕಾರಿ ಆದೇಶ/ ಸುತ್ತೋಲೆಗಳ ಕಡತ ನಿರ್ವಹಣೆ, ಕಛೇರಿ ಆದೇಶ ಪುಸ್ತಕ ನಿರ್ವಹಣೆ ಅಧಿಕಾರಿ/ಸಿಬ್ಬಂಧಿಗಳ ರಜೆ, ವೇತನ ಬಡ್ತಿ, ಪಿಂಚಣಿ ಸೌಲಭ್ಯ ಇತ್ಯಾದಿ ಕಡತಗಳ ನಿರ್ವಹಣೆ ಮಾಡುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |
| **ತೋಟಗಾರಿಕೆ ಸಹಾಯಕರು** | ರೈತ ಸಂಪರ್ಕ ಕೇಂದ್ರಕ್ಕೆ ಸಂಬಂಧಪಟ್ಟ ಮೂಲ ದಾಖಲಾತಿಗಳನ್ನು ಸಿದ್ಧಪಡಿಸುವುದು. ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ ಮಾಹಿತಿ ಸಂಗ್ರಹಿಸುವುದು. ರೈತರಿಗೆ ತಾಂತ್ರಿಕ ಮಾಹಿತಿ ನೀಡುವುದು. ಇಲಾಖ ಪರಿಕರಗಳನ್ನು ಮತ್ತು ರಾ.ತೋ.ಮಿ.ಗೆ ಸಂಬಂಧಪಟ್ಟಂತೆ ಇತರೆ ಕೆಲಸಗಳನ್ನು ನಿರ್ವಹಿಸುವುದು. ಮೇಲಧಿಕಾರಿಗಳ ಆದೇಶ ಪಾಲಿಸುವುದು. |
| **ತೋಟಗಾರ** | ತೋಟಗಾರಿಕಾ ಕ್ಷೇತ್ರಗಳ ಕೆಲಸ ನಿರ್ವಹಿಸುವುದು ಮತ್ತು ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |
| **ದ್ವಿ. ದ. ಸ.** | ಎಲ್ಲಾ ಯೋಜನೆಯ ಬಿಲ್ಲುಗಳನ್ನು ತಯಾರಿಸುವುದು ಮತ್ತು ಮಂಜೂರಾತಿಗೆ ಮಂಡಿಸುವುದು. |

**4 ಃ (III) ನಿಯಮ ತೆಗೆದುಕೊಳ್ಳುವ0ತಹ ಪ್ರಸ್ತಾವನೆಗಳಲ್ಲಿ ಪಾಲಿಸಬೇಕಾದ ಕ್ರಮ, ಮೇಲ್ವಿಚಾರಣೆ, ಚಾನಲ್‌ಗಳ ಮತ್ತು ಅಕೌ0ಟೆಬಲಿಟಿ ಸೇರಿದ0ತೆ**

| | |
|---|---|
| **ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು** | ಪ್ರಸ್ತಾವನೆಗಳ ಕುರಿತು ತೆಗೆದುಕೊಳ್ಳುವ ಕ್ರಮದ ಬಗ್ಗೆ ತೀಮಾ9ನಿಸುವುದು, ನಮ್ಮ ಹುದ್ದೆಗೆ ನೀಡಿದ ಅಧಿಕಾರ ವ್ಯಾಪ್ತಿಯೊಳಗೆ ಅನುಮೋದಿಸಿ ಮ0ಜೂರಾತಿ ನೀಡುವುದು, ಅಗತ್ಯ ಸ0ದಭ9ದಲ್ಲಿ ಮೇಲಾಧಿಕಾರಿಗಳಿಗೆ ಶಿಪಾರಸ್ಸು ಮಾಡುವುದು. |
| **ಸಹಾಯಕ ತೋಟಗಾರಿಕೆ ನಿರ್ದೇಶಕರು** | ಕಛೇರಿಯ ಎಲ್ಲಾ ಶಾಖೆಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಸಹಾಯಕರು ಸಲ್ಲಿಸಿರುವ ಕಡತಗಳನ್ನು ಪರಿಶೀಲಿಸಿ ಮಂಡಿಸುವುದು. ಪ್ರಮುಖ/ ತುರ್ತು ವಿಷಯಗಳನ್ನು ಹಿ.ಸ.ತೋ.ನಿ ರವರೊಂದಿಗೆ ಚರ್ಚಿಸಿ ತಮ್ಮ ಅಧೀನ ಸಿಬ್ಬಂಧಿಗಳಿಂದ ಕಡತವನ್ನು ಶೀಘ್ರವಾಗಿ ವಿಲೇವಾರಿಗೆ ಕ್ರಮ ಕೈಗೊಳ್ಳುವುದು ಹಿ.ಸ.ತೋ.ನಿ. ರವರ ಅನುಪಸ್ಥಿತಿಯಲ್ಲಿ ಕಛೇರಿಯ ದೈನಂದಿನ ಕೆಲಸಗಳನ್ನು ನಿರ್ವಹಿಸುವುದು ಹಾಗೂ ಎಲ್ಲಾ ಕಡತಗಳನ್ನು ಇತ್ಯರ್ಥಪಡಿಸಲು ಕ್ರಮ ಜರುಗಿಸುವುದು. |
| **ಸಹಾಯಕ ತೋಟಗಾರಿಕೆ ಅಧಿಕಾರಿಗಳು** | ರಾ.ತೋ.ಮಿ. ಯೋಜನೆಗೆ ಸಂಬಂಧಿಸಿದ ಎಲ್ಲಾ ಶಾಖೆಗಳ ಕೆಲಸಕಾರ್ಯಗಳನ್ನು ಶೀಘ್ರವಾಗಿ ವಿಲೇವಾರಿ ತರುವುದು. ರಾ.ತೋ.ಮಿ. ಯೋಜನೆಯ ಅಧೀನ ಕಛೇರಿಗಳ ವಾರ್ಷಿಕ ತಪಾಸಣೆ ನಡೆಸುವುದು. |
| **ಅಧೀಕ್ಷಕರು** | ಆಡಳಿತ ಶಾಖೆಗೆ ಸಂಬಂಧಿಸಿದ ಮೇಲು ಉಸ್ತುವಾರಿ ಹಾಗೂ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಆದೇಶದಂತೆ ಕಾರ್ಯ ನಿರ್ವಹಿಸುವುದು. |
| **ಪ್ರ.ದ.ಸ.** | ತಮ್ಮ ವ್ಯಾಪ್ತಿಗೆ ಸೇರಿದ ಇಲಾಖೆಯ ಎಲ್ಲಾ ಯೋಜನೆಗಳ ಕಡತಾ / ಕೆಲಸ ನಿರ್ವಹಣೆ, ವಿಧಾನಸಭೆ ಹಾಗೂ ಲೋಕಸಭೆ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಅತ್ಯಂತ ತ್ವರಿತವಾಗಿ ಉತ್ತರಿಸುವುದು ಹಾಗೂ ಎಲ್ಲಾ ಕೆಲಸಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಕಡತಗಳನ್ನು ವಿಳಂಬ ಮಾಡದೇ ಮುಂದಿನ ಆದೇಶಕ್ಕಾಗಿ ಹಾಗೂ ಕ್ರಮಕ್ಕಾಗಿ ಮಂಡಿಸುವುದು. |
| **ತೋಟಗಾರಿಕೆ** | ರೈತ ಸಂಪರ್ಕ ಕೇಂದ್ರಕ್ಕೆ ಸಂಬಂಧಪಟ್ಟ ಮೂಲ ದಾಖಲಾತಿಗಳನ್ನು ಸಿದ್ಧಪಡಿಸುವುದು. ತೋಟಗಾರಿಕೆ ಬೆಳೆಗಳ |

| | |
|---|---|
| **ಸಹಾಯಕರು** | ಪ್ರದೇಶ ವಿಸ್ತರಣೆ ಮಾಹಿತಿ ಸಂಗ್ರಹಿಸುವುದು. ರೈತರಿಗೆ ತಾಂತ್ರಿಕ ಮಾಹಿತಿ ನೀಡುವುದು. ಇಲಾಖ ಪರಿಕರಗಳನ್ನು ಮತ್ತು ರಾ.ತೋ.ಮಿ.ಗೆ ಸಂಬಂಧಪಟ್ಟಂತೆ ಇತರೆ ಕೆಲಸಗಳನ್ನು ನಿರ್ವಹಿಸುವುದು. ಮೇಲಧಿಕಾರಿಗಳ ಆದೇಶ ಪಾಲಿಸುವುದು. |
| **ತೋಟಗಾರ** | ಕ್ಷೇತ್ರದ ಕೆಲಸ ನಿರ್ವಹಣೆ. ಸಸ್ಯಾಭಿವೃದ್ಧಿಪಡಿಸುವುದು. ಮೇಲಾಧಿಕಾರಿಗಳ ಆದೇಶ ಪಾಲಿಸುವುದು |
| **ದ್ವಿ. ದ. ಸ.** | ಎಲ್ಲಾ ಯೋಜನೆಯ ಬಿಲ್ಲುಗಳನ್ನು ತಯಾರಿಸುವುದು ಮತ್ತು ಮಂಜೂರಾತಿಗೆ ಮಂಡಿಸುವುದು. |

## 4 ಃ (IV) ಕೆಲಸ ಕಾರ್ಯಗಳನ್ನು ನಿರ್ವಹಿಸಲು ನಿಗಧಿಪಡಿಸಲಾದ ವಿದಾನಗಳು, ಕಟ್ಟುಪಾಡುಗಳು.

| | |
|---|---|
| ಹಿ.ಸ.ತೋ.ನಿ | ತಾಲ್ಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಿಗೆ ವಹಿಸಿದ ಅಭಿವೃದ್ಧಿ, ವಿಸ್ತರಣೆ ಹಾಗೂ ಆಡಳಿತ ನಿರ್ವಹಣೆ ಅಧೀನ ಅಧಿಕಾರಿ/ ಸಿಬ್ಬಂಧಿಗಳಿಂದ ಯಶಸ್ವಿಯಾಗಿ ಮತ್ತು ಶೀಘ್ರವಾಗಿ ನಿರ್ವಹಿಸಲು ಕ್ರಮವಹಿಸುವುದು. ಇಲಾಖೆಯ ತಾಲ್ಲೂಕು ಉಸ್ತುವಾರಿ ಮಾಡುವುದು |
| **ಸ.ತೋ.ನಿ.** | ಕಛೇರಿ ಎಲ್ಲಾ ಶಾಖೆಗಳಿಂದ ಬರುವ ಕಡತ/ ವಹಿಗಳನ್ನು ಪರಿಶೀಲಿಸಿ ಹಿ.ಸ.ತೋ.ನಿ. ರವರಿಗೆ ಮಂಡಿಸುವುದು, ತುರ್ತು ವಿಷಯಗಳ ಕುರಿತು ಹಿ.ಸ.ತೋ.ನಿ. ರವರೊಂದಿಗೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳುವುದು ಹಾಗೂ ಹಿ.ಸ.ತೋ.ನಿ. ರವರ ಅನುಪಸ್ಥಿತಿಯಲ್ಲಿ ಕಛೇರಿಯ ದೈನಂದಿನ ಕೆಲಸ ನಿವ9ಹಿಸುವುದು. |
| **ಅಧೀಕ್ಷಕರು** | ರಾ.ತೋ.ಮಿ.ಗೆ ಸಂಬಂಧಿಸಿದ ಎಲ್ಲಾ ತಾಕುಗಳನ್ನು ಪರಿಶೀಲಿಸುವುದು. ರೈತ ಸಂಪರ್ಕ ಕೇಂದ್ರಗಳಲ್ಲಿ ಕೆಲಸ ನಿರ್ವಹಣೆ ಮತ್ತು ಕಡತಗಳನ್ನು ಹಿ.ಸ.ತೋ.ನಿ.ರವರಿಗೆ ಮಂಡಿಸುವುದು. |
| **ದ್ವಿ.ದ.ಸ** | ತಾಂತ್ರಿಕ ಸಹಾಯಕರು/ರೈತ ಸಂಪರ್ಕ ಕೇಂದ್ರ ಹಾಗೂ ವಿಭಾಗಕ್ಕೆ ಸಂಬಂಧಿಸಿದ ಬಿಲ್‌ಗಳನ್ನು ಪರಿಶೀಲಿಸಿ ನಿಯಮಾನುಸಾರವಾಗಿ ತಯಾರಿಸಿ ಮುಂದಿನ ಆದೇಶ ಕೋರಿ ಹಿ.ಸ.ತೋ.ನಿ. ರವರಿಗೆ ಮಂಡಿಸುವುದು. |
| **ತೋ.ಸ.** | ಸ.ತೋ.ಅ./ರೈತ ಸಂಪರ್ಕ ಕೇಂದ್ರ ವಿಭಾಗಕ್ಕೆ ಸಂಬಂಧಿಸಿದ ನಿಯಮಾನುಸಾರವಾಗಿ ಕಡತಗಳನ್ನು ಮತ್ತು ವರದಿಗಳನ್ನು ಪರಿಶೀಲಿಸಿ ಮುಂದಿನ ಆದೇಶ ಕೋರಿ ಹಿ.ಸ.ತೋ.ನಿ. ರವರಿಗೆ ಮಂಡಿಸುವುದು. |
| **ತೋಟಗಾರ** | ಮೇಲಧಿಕಾರಿಗಳ ಆದೇಶದಂತೆ ಕೆಲಸ ನಿರ್ವಹಣೆ. |

## 4 ಃ (V) ನೌಕರರು ಅವರವರ ಕರ್ತವ್ಯಗಳನ್ನು ನಿರ್ವಹಿಸಲಾದ/ ಉಪಯೋಗಿಸುವ/ ನಿಯಂತ್ರಣದಲ್ಲಿಟ್ಟುಕೊಂಡಿರುವ ನಿಯಮಗಳು/ ಸೂಚನೆಗಳು/ ಕೈಪಿಡಿಗಳು/ ದಾಖಲೆಗಳು ಮತ್ತು ನಿಬಂದನೆಗಳು.

1. ಕರ್ನಾಟಕ ನಾಗರೀಕ ಸೇವಾ ನಿಯಮಗಳು
2. ಕರ್ನಾಟಕ ನಾಗರೀಕ ಸೇವಾ ನಿಯಮಗಳು (ಸಿ.ಸಿ.ಎ. ನಿಯಮಾವಳಿ)
3. ಕರ್ನಾಟಕ ಆರ್ಥಿಕ ಸಂಹಿತೆ
4. ಕಛೇರಿ ಕೈಪಿಡಿ
5. ವೃಂದ ಮತ್ತು ನೇಮಕಾತಿ ನಿಯಮಗಳು
6. ಆಯವ್ಯಯ ಕೈಪಿಡಿ
7. ಕರ್ನಾಟಕ ಖಜಾನೆ ಸಂಹಿತೆ
8. ಸಾದಿಲ್ವಾರು ವೆಚ್ಚದ ಕೈಪಿಡಿ
9. ಕರ್ನಾಟಕ ನಾಗರೀಕ ಸೇವಾ ನಡತೆ ನಿಯಮ
10. ಕರ್ನಾಟಕ ಪಾರದರ್ಶಕತೆ ಅಧಿನಿಯಮ–1999
11. ಕರ್ನಾಟಕ ಪಂಚಾಯತರಾಜ್ ಅಧಿನಿಯಮ–1993
12. ಮಾಹಿತಿ ಹಕ್ಕು ಅಧಿನಿಯಮ–2005
13. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ಮಾರ್ಗಸೂಚಿಗಳು

14.ಸೂಕ್ಷ್ಮ ನೀರಾವರಿ ಯೋಜನೆಯ ಮಾರ್ಗಸೂಚಿಗಳು

15.ರಾಜ್ಯ ವಲಯ ಹಾಗೂ ಜಿಲ್ಲಾ ಪಂಚಾಯತ ಯೋಜನೆಗಳಿಗೆ ಸಂಬಂಧಿಸಿದ ಮಾರ್ಗಸೂಚಿಗಳು

16.ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಅಧಿನಿಯಮ

17.ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಸಂಬಂಧಿಸಿದ ಮಾರ್ಗಸೂಚಿಗಳು

18.ಇಲಾಖೆ ಮತ್ತು ಆರ್ಥಿಕ ಇಲಾಖೆ ಹೊರಡಿಸಿದ ಡೆಲಿಗೇಷನ್ ಆಫ್ ಪಾವರ್ಸ್ ಮತ್ತು ವಿಶೇಷ ಡೆಲಿಗೇಷನ್ ಆಫ್ ಪವರ್ಸ್

19.ಸರಕಾರದ ಅಧಿಸೂಚನೆಗಳು (ಸುತ್ತೋಲೆಗಳು)

20.ಇಲಾಖೆಯಿಂದ ಹೊರಡಿಸಲಾದ ವಿಶೇಷ ಆದೇಶಗಳು ಮತ್ತು ಸುತ್ತೋಲೆಗಳು

- ಸಾಮಾನ್ಯ ಸ್ವೀಕೃತಿ.
- ನಮೂನೆ VIII ರವಾನೆ ರಿಜಿಸ್ಟರ್.
- ನಮೂನೆ–ಎ ಮುದ್ದಾಮ ರಿಜಿಸ್ಟರ್.
- ನಿಯಮ 27 (ನಿಯಮ 63) ಸ್ಟಾಂಪ್ ರಿಜಿಸ್ಟರ್.
- ನಮೂನೆ–6 (ನಿಯಮ 38)ನಗದು ಪುಸ್ತಕ ರಿಜಿಸ್ಟರ್.
- ನಮೂನೆ ಸಂಖ್ಯೆ–24ಎ ವೇತನ ಬಟವಾಡೆ ಪುಸ್ತಕ (ನಮೂನೆ ಸಂಖ್ಯೆ 24ಎ)
- ಆಕಸ್ಮಿಕ ರಜಾ ವಹಿ.
- ಹಿ.ಸ.ತೋ.ನಿ ಕಛೇರಿ ಅಧಿಕಾರಿ/ ಸಿಬ್ಬಂದಿ ವರ್ಗದವರ ವೇತನ ಬಿಲ್ಲಿನಲ್ಲಿ ಕಡಿತಗೊಳ್ಳುವ ರಿಜಿಸ್ಟರ್ ಹಬ್ಬದ ಮುಂಗಡ
- ಸಾ.ಭ.ನಿ,ಕೆ.ಜಿ.ಐ.ಡಿ, ಎಲ್.ಐ.ಸಿ, ವೃತ್ತಿ ತೆರಿಗೆ, ಜಿ.ಐ.
- ಲೇಖನ ಸಾಮಗ್ರಿ ವಿತರಣಾ ರಿಜಿಸ್ಟರ್.
- ದಿನವಹಿ ದಾಸ್ತಾನು ಪುಸ್ತಕ ರಿಜಿಸ್ಟರ್.
- ಈ ಕಛೇರಿಯ ಸಾಧಿಲ್ವಾರು ಪುಸ್ತಕ.
- ನಮೂನೆ 24 ನಿಯಮ–58 ಪ್ರಯಾಣ ಭತ್ಯೆ ರಿಜಿಸ್ಟರ್ (ನಮೂನೆ–24 (ನಿಯಮ–58).
- ಮಾಹೆವಾರು ಖರ್ಚಿನ ತಃಖ್ತೆಯ ರಿಜಿಸ್ಟರ್.
- ಅಧಿಕಾರಿ/ ಸಿಬ್ಬಂದಿಗಳ ಹಾಜರಾತಿ ಪಟ್ಟಿ ರಿಜಿಸ್ಟರ್.
- ಸಾಮಾನ್ಯ ಭವಿಷ್ಯ ನಿಧಿಯ ಮುಂಗಡ ಡ್ರಾ ಮಾಡುವ ರಿಜಿಸ್ಟರ್.
- ವಿದ್ಯುತ್ ಬಳಕೆ ವೆಚ್ಚದ ವಹಿ.
- ವಿಷಯ ವಹಿ ರಿಜಿಸ್ಟರ್.
- ಎನ್.ಡಿ.ಸಿ ಬಿಲ್ಲು ರಿಜಿಸ್ಟರ್.
- ನಮೂನೆ–14 ಅಂತಿಮ ವೇತನ ಪ್ರಮಾಣ ಪತ್ರ.
- ಸಾದಿಲ್ವಾರು ಬಿಲ್ಲುಗಳ ವಿವರ.
- ಕಂಪ್ಯೂಟರ್ ರಿಜಿಸ್ಟರ್.
- ನಮೂನೆ 34–ಎ ಪೀಠೋಪಕರಣ ವಹಿ.

- ಬಿ–7 ನಗದು ರಶೀದಿ.
- ಅಧಿಕಾರಿ/ ಸಿಬ್ಬಂದಿಯರ ಕಾರ್ಯನಿರ್ವಾಹಣಾ ವರದಿ ಫೈಲ್.
- ಸಿಬ್ಬಂದಿಗಳ ಸೇವಾ ಪುಸ್ತಕ ರಿಜಿಸ್ಟರಗಳು.
- ಭಾರತ ಸರ್ಕಾರ ಮಾಹಿತಿ ಹಕ್ಕು ನಿಯಮ–2005.
- ಸರ್ಕಾರ ಸುತ್ತೋಲೆಗಳ ಫೈಲ್.
- ಲೆಕ್ಕ ತಪಾಸಣೆ ಫೈಲ್.
- ರಾಷ್ಟ್ರೀಯ ತೋಟಗಾರಿಕೆ ಮಿಷನ್ ನಗದು ಪುಸ್ತಕ ವಹಿ.
- ರಾಷ್ಟ್ರೀಯ ತೋಟಗಾರಿಕೆ ಮಿಷನ್ ಡಿ.ಸಿ ಬಿಲ್ಲುಗಳ ರಿಜಿಸ್ಟರ್.

.

## 4 ಃ (VI) ಕಡತ ಶೀರ್ಷಿಕೆ

| ಕ್ರ.ಸಂ. | ಕಡತದ ಶಾಖೆ | | ದಾಖಲಾತಿಗಳ ನಿರ್ವಹಣೆ | ದಾಖಲಾತಿಗಳ ಉಲ್ಲೇಖ |
|---|---|---|---|---|
| 1. | ಆಡಳಿತ ಶಾಖೆ | ADM | ತೊಟಗಾರಿಕೆ ಇಲಾಖೆಯ ಸಿಬ್ಬಂಧಿ ಮತ್ತು ಅಧಿಕಾರಿಗಳ, ಸೇವಾ ವಿಷಯ ಗಳು, ಶಿಸ್ತು, ನಡತೆ ಹಾಗೂ ಲೆಕ್ಕ ಪತ್ರ ತಪಾಸಣೆ ಹಾಗೂ ಆರ್ಥಿಕ ವಿಚಾರಗಳು | ಹಿಸತೋನಿ/ಜಿಪಂಚಿ/ವಿನಿ/ |
| 2. | ತಾಂತ್ರಿಕ ಶಾಖೆ | TA | ತೋಟಗಾರಿಕೆ ಇಲಾಖೆಯ ತಾಂತ್ರಿಕ ಪತ್ರ ವ್ಯವಹಾರಗಳು, ವರದಿಗಳು ಹಾಗೂ ಇನ್ನಿತರೇ ಪತ್ರ ವ್ಯವಹಾರಗಳು | ಹಿಸತೋನಿ/ಜಿಪಂಚಿ/ತಾಸ/ |

## 4 ಃ (VII) ಪಾಲಸಿಗಳನ್ನು ಮಾಡುವಾಗ ಅಥವಾ ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಇರುವ ಏರ್ಪಾಡುಗಳನ್ನು ಸಾರ್ವಜನಿಕ ಸದಸ್ಯರುಗಳ ಸಹಭಾಗಿತ್ವ ಮು0ತಾದ ವಿವರಗಳು.

ಇಲಾಖೆ ಮಾರ್ಗಸೂಚಿ/ಎಂ.ಎಂ.ಆರ್. ಕಾರ್ಯಕ್ರಮಗಳು ಜಿಲ್ಲಾ ಪಂಚಾಯತ್ ಹಾಗೂ ಇಲಾಖಾ ಮೇಲಧಿಕಾರಿಗಳ ಆದೇಶಗಳ ಅಡಿಯಲ್ಲಿ ಯೋಜನೆಗಳ ಅನುಷ್ಠಾನಗೊಳಿಸಲು ಕ್ರಮ ತೆಗೆದುಕೊಳ್ಳುವುದು. ಸಾರ್ವಜನಿಕ ಕುಂದುಕೊರತೆಗಳನ್ನು ಕಾನೂನಿನ ಚೌಕಟ್ಟಿನೊಳಗೆ ನಿರ್ಧರಿಸಿ ಕ್ರಮ ಕೈಗೊಳ್ಳುವುದು.

## 4 ಃ (VIII) ಈ ಇಲಾಖೆಯಿಂದ ರಚಿಸಲ್ಪಡುವ ಅಥವಾ ಸಲಹೆಗಳನ್ನು ಪಡೆಯುವ ಸಲುವಾಗಿ ಎರಡು ಅಥವಾ ಅದಕ್ಕಿಂತ ಹೆಚ್ಚಾಗಿರುವ ಸದಸ್ಯರ ಸಮಿತಿ ಅಥವಾ ಇತರ ಪಟ್ಟಿ ಹಾಗೂ ಇಂತಹ ಕಮಿಟಿ ಮತ್ತು ಸಮಿತಿಗಳು ನಡೆಸುವ ಸೇವೆ ಮತ್ತು ನಡವಳಿಗಳನ್ನು ಸಾರ್ವಜನಿಕರು ಆಕ್ಷೇಪಿಸಬಹುದೇ? ಅಥವಾ ಇಂತಹ ಸಭೆಗಳ ನಡವಳಿಗಳನ್ನು ವೀಕ್ಷಿಸಲು ಸಾರ್ವಜನಿಕರಿಗೆ ಮುಕ್ತ ಅವಕಾಶವಿದೆಯೇ

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಜಿಲ್ಲಾ ಸಮಿತಿ ಮತ್ತು ಜಿಲ್ಲಾ ತಾಂತ್ರಿಕ ಸಮಿತಿಯು ತೆಗೆದುಕೊಳ್ಳುವ ನಿರ್ಣಯಗಳ ಅನುಷ್ಠಾನಕ್ಕೆ ಕ್ರಮ ವಹಿಸುವುದು.

**4 : (IX) ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ) ಕಡೂರು ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ ನೌಕರರ ದೂರವಾಣಿ ವಿವರಗಳ ಪಟ್ಟಿ.**

| ಕ್ರ.ಸಂ | ಹುದ್ದೆ | ಹೆಸರು | ದೂರವಾಣಿ ಸಂಖ್ಯೆ |
|---|---|---|---|
| 1. | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು | ಶ್ರೀ ಮಂಜುನಾಥ್ ಸಿ. | 9482475376 |
| 2. | ಸಹಾಯಕ ತೋಟಗಾರಿಕೆ ಅಧಿಕಾರಿಗಳು | ಶ್ರೀ ರಾಜಶೇಖರಪ್ಪ | 9480066855 |
| 3. | ಸಹಾಯಕ ತೋಟಗಾರಿಕೆ ಅಧಿಕಾರಿಗಳು | ಶ್ರೀ ವಸಂತ್ ಪಿ.ಟಿ. | 8095367328 |
| 4. | ಸಹಾಯಕ ತೋಟಗಾರಿಕೆ ಅಧಿಕಾರಿಗಳು | ಶ್ರೀ ರಾಮಚಂದ್ರ ಟಿ | 9480987985 |
| 5. | ಸಹಾಯಕ ತೋಟಗಾರಿಕೆ ಅಧಿಕಾರಿಗಳು | ಶ್ರೀ ವಿಜಯ್ ಕುಮಾರ್ | 8197081543 |
| 6. | ಸಹಾಯಕ ತೋಟಗಾರಿಕೆ ಅಧಿಕಾರಿಗಳು | ಕುಮಾರಿ ನಮಿತ ಪಿ. | 9148220469 |
| 7. | ತೋಟಗಾರಿಕೆ ಸಹಾಯಕರು | ಶ್ರೀ ಕಲ್ಲೇಶಪ್ಪ ವಿ. ಎಸ್. | 9242292793 |
| 8. | ತೋಟಗಾರಿಕೆ ಸಹಾಯಕರು | ಕುಮಾರಿ ರೇಖಾ ಕೆ.ಟಿ. | 8277061764 |
| 9. | ತೋಟಗಾರಿಕೆ ಸಹಾಯಕರು | ಶ್ರೀ ಮಾಲತೇಶ್ | 9535898700 |
| 10. | ಅಧೀಕ್ಷಕರು | ಶ್ರೀ ಕೃಷ್ಣಮೂರ್ತಿ ಜಿ.ಎ. | 9900713422 |
| 10. | ದ್ವಿ.ದ.ಸ. | ಶ್ರೀಮತಿ ಉಮೇಸಲ್ಮಾ | 8105443574 |
| 11 | ತೋಟಗಾರ | ಶ್ರೀ ನಾರಾಯಣ | – |
| 12. | ತೋಟಗಾರ | ಶ್ರೀ ಶಿವಪ್ಪ | 8123719699 |

**4 : (X) ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ) ಕಡೂರು ರವರ ಕಛೇರಿಯಲ್ಲಿ ಕಾರ್ಯನಿವ9ಹಿಸುತ್ತಿರುವ ಅಧಿಕಾರಿ/ ನೌಕರರ ಮಾರ್ಚ –2017 ರ ವೇತನದ ವಿವರ**

| ಕ್ರ. ಸಂ | ಹುದ್ದೆ | ಹೆಸರು | ವೇತನ (ರೂ.ಗಳಲ್ಲಿ) |
|---|---|---|---|
| 1 | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು | ಶ್ರೀ ಮಂಜುನಾಥ್ ಸಿ. | 28100 |
| 2 | ಸಹಾಯಕ ತೋಟಗಾರಿಕೆ ಅಧಿಕಾರಿಗಳು | ಶ್ರೀ ರಾಜಶೇಖರಪ್ಪ | 22800 |
| 3 | ಸಹಾಯಕ ತೋಟಗಾರಿಕೆ ಅಧಿಕಾರಿಗಳು | ಶ್ರೀ ವಸಂತ್ ಪಿ.ಟಿ. | 23400 |
| 4 | ಸಹಾಯಕ ತೋಟಗಾರಿಕೆ ಅಧಿಕಾರಿಗಳು | ಶ್ರೀ ರಾಮಚಂದ್ರ ಟಿ | 21600 |
| 5 | ಸಹಾಯಕ ತೋಟಗಾರಿಕೆ ಅಧಿಕಾರಿಗಳು | ಶ್ರೀ ವಿಜಯ್ ಕುಮಾರ್ | 23400 |
| 6 | ಸಹಾಯಕ ತೋಟಗಾರಿಕೆ ಅಧಿಕಾರಿಗಳು | ಕುಮಾರಿ ನಮಿತ ಪಿ. | 21600 |
| 7 | ತೋಟಗಾರಿಕೆ ಸಹಾಯಕರು | ಶ್ರೀ ಕಲ್ಲೇಶಪ್ಪ ವಿ. ಎಸ್. | 14550 |
| 8 | ತೋಟಗಾರಿಕೆ ಸಹಾಯಕರು | ಕುಮಾರಿ ರೇಖಾ ಕೆ.ಟಿ. | 13900 |
| 9 | ತೋಟಗಾರಿಕೆ ಸಹಾಯಕರು | ಶ್ರೀ ಮಾಲತೇಶ್ | 13900 |
| 10 | ಅಧೀಕ್ಷಕರು | ಶ್ರೀ ಕೃಷ್ಣಮೂರ್ತಿ ಜಿ.ಎ. | **22200** |
| 11 | ದ್ವಿ.ದ.ಸ. | ಶ್ರೀಮತಿ ಉಮೇಸಲ್ಮಾ | **12750** |
| 12 | ತೋಟಗಾರ | ಶ್ರೀ ನಾರಾಯಣ | **18100** |
| 13 | ತೋಟಗಾರ | ಶ್ರೀ ಶಿವಪ್ಪ | **17200** |
| | | | |

## 4 ፡ (XI) ಆಯವ್ಯಯ ವಿತರಣೆ 2016–17

| ಕ್ರ.ಸಂ. | ಯೋಜನೆ/ ಯೋಜನೇತರ | ಭೌತಿಕ ಗುರಿ | ಆರ್ಥಿಕ ಗುರಿ (ರೂ ಲಕ್ಷಗಳಲ್ಲಿ) |
|---|---|---|---|
| ಜಿಲ್ಲಾಪಂಚಾಯಿತಿ ಯೋಜನೆಗಳು | | | |
| 1 | ತೆಂಗು ಬೀಜ ಸಂಗ್ರಹಣೆ ಹಾಗೂ ಸಸ್ಯಾಭಿವೃದ್ಧಿ 2435–00–101–0–28 | 9002 | 2.34 |
| 2 | ಪ್ರಚಾರ ಮತ್ತು ಸಾಹಿತ್ಯ 2435–00–101–0–38 | 25000 | 0.45 |
| 3 | ತೋಟಗಾರಿಕೆ ಕ್ಷೇತ್ರ ನಿರ್ವಹಣೆ 2435–00–101–0–35 | 2 | 9.00 |
| 4 | ಸೂಕ್ಷ್ಮ ನೀರಾವರಿ ಯೋಜನೆ (ಡಿ.02) | 160 | 40 |
| ತಾಲ್ಲೂಕುಪಂಚಾಯಿತಿ ಯೋಜನೆಗಳು | | | |
| 5 | ರೈತರಿಗಾಗಿ ತರಬೇತಿ 2435–00–101–0–64 | 66 | 0.37 |
| 6 | ಸಾಮಾಜಿಕ ತೋಟಗಾರಿಕೆ, ಸಸ್ಯ ಸಂರಕ್ಷಣೆ, ರೈತರಿಗೆ ಸಹಾಯ, ಸರ್ಕಾರಿ ಕಛೇರಿ/ಅತಿಥಿ ಗೃಹಗಳ ಮುಂದಿಡಲು ಅಲಂಕಾರಿಕ ಗಿಡಗಳ ಅಭಿವೃದ್ಧಿ 2435–00–101–0–64 | 335 | 3.12 |
| 7 | ವಿಶೇಷ ಘಟಕ ಯೋಜನೆ 2225–00–101–0–64 | 100 | 1.50 |
| 8 | ಗಿರಿಜನ ಉಪಯೋಜನೆ 2225–00–102–0–70 | 7 | 0.20 |
| ರಾಜ್ಯವಲಯ ಯೋಜನೆಗಳು | | | |
| 9 | ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ (S10) | 880 | 71.17 |
| 10 | ಕೀಟ ಮತ್ತು ಸಮಗ್ರ ನಿಯಂತ್ರಣ ಕಾರ್ಯಕ್ರಮ ರೂ. 5250/- ಪ್ರತೀ ಹೆ. | 208 | 10.5750 |
| ಕೇಂದ್ರ ವಲಯ ಯೋಜನೆಗಳು | | | |
| 11 | ಪಿ.ಎಂ.ಕೆ.ಎಸ್.ವೈ (ಎಸ್.04) | 800 | 167.00 |
| 12 | ರಾಷ್ಟ್ರೀಯ ತೋಟಗಾರಿಕೆ ಮಿಷನ್2401–119–4000–31 (NHM) | 85.20 | 81.82 |
| 13 | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ 2401–00–800–2–43 (RKVY) | 1964 | 232.80 |
| 14 | ತೆಂಗು ಬೆಳೆ ಅಭಿವೃದ್ಧಿ ಯೋಜನೆ (CDB)2401–00–108–2–49) | 50 | 8.75 |

**ತೋಟಗಾರಿಕೆ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳ ವಿವರ**

## ತಾಲ್ಲೂಕಿನಲ್ಲಿ 2016–17 ನೇ ಸಾಲಿನ ಅನುಷ್ಠಾನಗೊಳಿರುವ ವಿವಿಧ ಜಿಲ್ಲಾ ಪಂಚಾಯಿತಿ ಹಾಗೂ ರಾಜ್ಯ ವಲಯ ಯೋಜನೆಗಳ ಸಂಕ್ಷಿಪ್ತ ನೋಟ

| ಯೋಜನೆಗಳು | ವಿವರ |
|---|---|
| **ತೆಂಗು ಬೀಜ ಸಂಗ್ರಹಣೆ ಹಾಗೂ ಸಸ್ಯಾಭಿವೃದ್ಧಿ** | ಉತ್ತಮ ಜಾತಿಯ ತೆಂಗಿನ ಸಸಿಗಳ ಉತ್ಪಾದನೆ ಹಾಗೂ ಕಡಿಮೆ ದರದಲ್ಲಿ ರೈತರಿಗೆ ವಿತರಣೆ ಅಲ್ಲದೆ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಯಲ್ಲಿ ರೈತರಿಗೆ ವಿತರಿಸುವುದು ಹಾಗೂ ತೆಂಗು, ಸಪೋಟ ಕಸಿ/ಸಸಿ ಗಿಡಗಳನ್ನು ವೃದ್ದಿಪಡಿಸಿ ರೈತರಿಗೆ ವಿತರಿಸುವುದು ಹಾಗೂ ಇಲಾಖಾ ಯೋಜನೆಗಳಿಗೆ ಉಪಯೋಗಿಸುವುದು., |

| | |
|---|---|
| **ಪ್ರಚಾರ ಮತ್ತು ಸಾಹಿತ್ಯ** | ಫಲಪುಷ್ಪ ಪ್ರದರ್ಶನ/ ವಿಚಾರ ಸಂಕೀರ್ಣ ಏರ್ಪಡಿಸುವುದು ಮತ್ತು ತೋಟಗಾರಿಕೆ ಬೆಳೆಗಳಿಗೆ ಸಂಬಂದಿಸಿದಂತೆ ಪ್ರಚಾರ ಸಾಹಿತ್ಯವನ್ನು ಕರಪತ್ರಗಳಲ್ಲಿ ಮುದ್ರಿಸಿ ರೈತರುಗಳಿಗೆ ವಿತರಿಸುವುದು. |
| **ರೈತರಿಗೆ ತರಬೇತಿ** | ಈ ಯೋಜನೆಯಲ್ಲಿ ಎರಡು ದಿನಗಳ ತರಬೇತಿಯಿದ್ದು, ತರಬೇತಿ ಅವಧಿಯಲ್ಲಿ ಪ್ರತಿಯೊಬ್ಬ ರೈತರಿಗೆ ರೂ. 125.00 ದಿನಭತ್ಯೆಯಾಗಿ ಹಾಗೂ ರೂ, 15.00 ಪ್ರವಾಸ ಭತ್ಯೆ ಹಾಗೂ ಲಘು ಉಪಹಾರಕ್ಕಾಗಿ ಹಾಗೂ ಮಿನಿ ಕಿಟ್ ವಿತರಣೆ ಮತ್ತು ತರಬೇತಿ ಸಾಮಾಗ್ರಿಗಾಗಿ ರೂ. 60.00 ವಿನಿಯೋಗಿಸಲಾಗುವುದು. |
| **ತೋಟಗಾರಿಕೆ ಪ್ರದೇಶ ವಿಸ್ತರಣೆ, ಅಲಂಕಾರಿಕೆ ಗಿಡಗಳ ಅಭಿವೃದ್ಧಿ, ಸಸ್ಯ ಸಂರಕ್ಷಣಾ ಔಷಧಿಗಳ ವಿತರಣೆ** | ಈ ಯೋಜನೆಯಲ್ಲಿ ಕುಂಡಗಳಲ್ಲಿ ಅಲಂಕಾರಿಕ ಗಿಡಗಳನ್ನು ಅಭಿವೃದ್ದಿ ಪಡಿಸಿ ಸರ್ಕಾರಿ ಕಛೇರಿಗಳಿಗೆ ಹಾಗೂ ಅಥಿತಿ ಗೃಹಗಳಿಗೆ ನೀಡಲಾಗುವುದು. ಯೋಜನೆಯಡಿಯಲ್ಲಿ ಅರ್ಧ ಅಥವಾ 1 ಎಕರೆ ವಿಸ್ತೀರ್ಣದಲ್ಲಿ ತೆಂಗು/ಹಣ್ಣಿನ ಗಿಡಗಳನ್ನು ಅಭಿವೃದ್ದಿ ಪಡಿಸುವ ಆಸಕ್ತ ರೈತರಿಗೆ ಉಚಿತವಾಗಿ ಗಿಡಗಳನ್ನು ವಿತರಿಸಲಾಗುವುದು. ಈ ಯೊಜನೆಯಡಿಯಲ್ಲಿ ಶೇ50 ರ ಸಹಾಯಧನದಲ್ಲಿ ತೋಟಗಾರಿಕೆ ಬೆಳೆಗಳಿಗೆ ತಗಲುವ ರೋಗ ಮತ್ತು ಕೀಟ ಹತೋಟಿಗೆ ಸಸ್ಯ ಸಂರಕ್ಷಣ ಔಷದಿಗಳ ಖರೀಧಿಗೆ ಸಹಾಯಧನ ಒದಗಿಸಲಾಗುವುದು. |
| **ವಿಶೇಷ ಘಟಕ ಯೋಜನೆ** | ತೆಂಗಿನ ಸಸಿಗಳು ಮತ್ತು ರಾಸಾಯನಿಕ ಗೊಬ್ಬರಗಳನ್ನು ವಿತರಣೆ ಮಾಡಲಾಗಿದೆ. |
| **ಗಿರಿಜನ ಉಪಯೋಜನೆ** | ತೆಂಗಿನ ಸಸಿಗಳು ಮತ್ತು ರಾಸಾಯನಿಕ ಗೊಬ್ಬರಗಳನ್ನು ವಿತರಣೆ ಮಾಡಲಾಗಿದೆ. |
| **ತೋಟಗಾರಿಕೆ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ** | ಕೀಟ ಮತ್ತು ರೋಗಗಳ ನಿಯಂತ್ರಣಕ್ಕಾಗಿ ರಿಯಾಯಿತಿ ದರದಲ್ಲಿ ಸಸ್ಯ ಸಂರಕ್ಷಣಾ ಔಷಧಿಗಳ ಖರೀಧಿಗೆ ಸಹಾಯಧನ ಒದಗಿಸಲಾಗುವುದು. |
| **ತೋಟಗಾರಿಕೆಯಲ್ಲಿ ಯಾಂತ್ರೀಕರಣ** | ತೋಟಗಾರಿಕೆಗೆ ಸಂಬಂಧಿಸಿದ ಯಂತ್ರ / ಉಪಕರಣಗಳನ್ನು ಖರೀದಿಸಿದ ಫಲಾನುಭವಿಗೆ ಶೇ 50 ರ ಸಹಾಯಧನ ನೀಡಲಾಗುವುದು. |
| **ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ** | ಕಡೂರು ತಾಲ್ಲೂಕಿನಲ್ಲಿ ಈ ಯೋಜನೆಯಡಿ ಫಲಾನುಭವಿಗಳಿಗೆ ಸಾಮಾನ್ಯ ಶೇ.50ರ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಶೇ 90 ರ ಸಹಾಯಧನ ನೀಡಲಾಗುವುದು |
| **ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ** | ಕಡೂರು ತಾಲ್ಲೂಕಿನಲ್ಲಿ ಈ ಯೋಜನೆಯಡಿ ಫಲಾನುಭವಿಗಳಿಗೆ ಸಾಮಾನ್ಯ ಶೇ.50ರ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಶೇ 90 ರ ಸಹಾಯಧನ ನೀಡಲಾಗುವುದು |
| **ಪಿ.ಎಂ.ಕೆ.ಎಸ್.ವೈ ಯೋಜನೆಯಡಿಯಲ್ಲಿ ಹನಿ ನೀರಾವರಿ** | ಕಡೂರು ತಾಲ್ಲೂಕಿನಲ್ಲಿ ಹನಿ ನೀರಾವರಿ ಅಳವಡಿಸಿಕೊಂಡ ಫಲಾನುಭವಿಗಳಿಗೆ ಮೊದಲ 2 ಹೆ. ಶೇ.90 ಹಾಗೂ ಉಳಿದ 3 ಹೆಕ್ಟೇರ್ ಪ್ರದೇಶಕ್ಕೆ ಮಾರ್ಗಸುಚಿಯನ್ವಯ ಶೇ 50/45 ರ ಸಹಾಯಧನ ನೀಡಲಾಗಿರುತ್ತದೆ. |

**4 : (XII) ಸಹಾಯಧನದೊ0ದಿಗೆ ನಡೆಸುವ ಯೋಜನೆಗಳು ಅ0ತಹ ಯೋಜನೆಗಳ ಫಲಾನುಭವಿಗಳ ವಿವರ ಮತ್ತು ಮ0ಜೂರಾದ ಹಣ.**

**ತಾಲ್ಲೂಕಿನ ಆಯಾ ಯೋಜನೆಗಳ ವಹಿಗಳಲ್ಲಿ ನಮೂದಿಸಲಾಗಿದೆ.**

**ಮುಂದುವರೆದು 2016-17 ನೇ ಸಾಲಿಗೆ ಸಹಾಯಧನದೊ0ದಿಗೆ ನಡೆಸುವ /ಪಲಾನುಭವಿ ಆಧಾರಿತ ಯೋಜನೆಗಳು ಮತು ಮ0ಜೂರಾದ ಹಣದ ವಿವರ ಕೆಳಗಿನಂತಿರುತ್ತದೆ**

| ಕ್ರ.ಸ೦. | ಯೋಜನೆ/ ಯೋಜನೇತರ | ಒಟ್ಟು ವಾರ್ಷಿಕ ಆರ್ಥಿಕ ಗುರಿ (ಲಕ್ಷ) | ಈವರೆಗೆ ಬಿಡುಗಡೆ ಯಾಗಿರುವ ಅನುದಾನ (ರೂ ಲಕ್ಷಗಳಲ್ಲಿ) |
|---|---|---|---|
| **ಜಿಲ್ಲಾಪಂಚಾಯಿತಿ ಯೋಜನೆಗಳು** | | | |
| 1 | ತೆಂಗು ಬೀಜ ಸಂಗ್ರಹಣೆ ಹಾಗೂ ಸಸ್ಯಾಭಿವೃದ್ಧಿ 2435–00–101–0–28 | 2.34 | 2.34 |
| 2 | ಪ್ರಚಾರ ಮತ್ತು ಸಾಹಿತ್ಯ 2435–00–101–0–38 | 0.45 | 0.35 |
| 3 | ತೋಟಗಾರಿಕೆ ಕ್ಷೇತ್ರ ನಿರ್ವಹಣೆ 2435–00–101–0–35 | 9.00 | 9.00 |
| 4 | ಸೂಕ್ಷ್ಮ ನೀರಾವರಿ ಯೋಜನೆ (ಡಿ.02) | 40 | 40 |
| **ತಾಲ್ಲೂಕುಪಂಚಾಯಿತಿ ಯೋಜನೆಗಳು** | | | |
| 5 | ರೈತರಿಗಾಗಿ ತರಬೇತಿ 2435–00–101–0–64 | 0.37 | 0.33 |
| 6 | ಸಾಮಾಜಿಕ ತೋಟಗಾರಿಕೆ, ಸಸ್ಯ ಸಂರಕ್ಷಣೆ, ರೈತರಿಗೆ ಸಹಾಯ, ಸರ್ಕಾರಿ ಕಛೇರಿ/ಅತಿಥಿ ಗೃಹಗಳ ಮುಂದಿಡಲು ಅಲಂಕಾರಿಕ ಗಿಡಗಳ ಅಭಿವೃದ್ಧಿ 2435–00–101–0–64 | 3.12 | 3.12 |
| 7 | ವಿಶೇಷ ಘಟಕ ಯೋಜನೆ 2225–00–101–0–64 | 1.50 | 1.50 |
| 8 | ಗಿರಿಜನ ಉಪಯೋಜನೆ 2225–00–102–0–70 | 0.20 | 0.10 |
| **ರಾಜ್ಯವಲಯ ಯೋಜನೆಗಳು** | | | |
| 9 | ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ (S10) | 71.17 | 71.17 |
| 10 | ಕೀಟ ಮತ್ತು ಸಮಗ್ರ ನಿಯಂತ್ರಣ ಕಾರ್ಯಕ್ರಮ ರೂ. 5250/- ಪ್ರತೀ ಹೆ. | 1.36 | 1.36 |
| **ಕೇಂದ್ರ ವಲಯ ಯೋಜನೆಗಳು** | | | |
| 11 | ಪಿ.ಎಂ.ಕೆ.ಎಸ್.ವೈ (ಎಸ್.04) | 167.00 | 128.00 |
| 12 | ರಾಷ್ಟ್ರೀಯ ತೋಟಗಾರಿಕೆ ಮಿಷನ್2401–119–4000–31 (NHM) | 81.82 | 60.25 |
| 13 | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ 2401–00–800–2–43 (RKVY) | 232.80 | 228.52 |
| 14 | ತೆಂಗು ಬೆಳೆ ಅಭಿವೃದ್ಧಿ ಯೋಜನೆ (CDB)2401–00–108–2–49) | 8.75 | 8.75 |

**4 ಃ (XIII) ಇಲಾಖೆಯಿ೦ದ ಅಥರೈಜೇಷನ್ ಮಂಜೂರಾದ ಅಥವಾ ಪರವಾನಿಗೆ ನೀಡಲಾದ ಮತ್ತು ಕಡಿಮೆ ದರದಲ್ಲಿ ಸವಲತ್ತುಗಳನ್ನು ಪಡೆಯಲಾದ ರೆಸಿಪಿಯೆಂಟ್ಸ್‌ಗಳ ವಿವರಗಳು.**

ಯಾವುದೂ ಇರುವುದಿಲ್ಲ.

**4 ಃ (XIV) ಕುಗ್ಗಿಸಲಾದ ಎಲೆಕ್ಟ್ರಾನಿಕ್ ಮಾದರಿಯಲ್ಲಿ ಲಭ್ಯವಿರುವ ಮಾಹಿತಿ ವಿವರ ದೊರಕುವಂತೆ ಅಥವಾ ಮಾಹಿತಿ ಇಟ್ಟುಕೊಂಡಿರುವಿಕೆ.**

**ಎಲೆಕ್ಟ್ರಾನಿಕ್ ಉಪಕರಣದಲ್ಲಿ ಮಾಹಿತಿಗಳು ಲಭ್ಯವಿರುತ್ತದೆ.**

**4 ಃ (XV) ಮಾಹಿತಿ ಪಡೆಯಲು ಸಾವ9ಜನಿಕರಿಗೆ ಲಭ್ಯವಿರುವ ಅವಕಾಶ ವಿಚಾರಗಳು ಗ್ರಂಥಾಲಯ ಅಥವಾ ಓದುವ ಕೊಠಡಿಗಳನ್ನು ಒಳಗೊಂಡು ಸಾರ್ವಜನಿಕ ಉಪಯೋಗಕ್ಕಾಗಿ ತೆರೆದಿದ್ದಾರೆ?**

ಕಛೇರಿಯಲ್ಲಿ ಗ್ರಂಥಾಲಯ ಮತ್ತು ಓದುವ ಕೊಠಡಿಗಳ ಸೌಲಭ್ಯವಿರುವುದಿಲ್ಲ

**4 ಃ (XVI) ಸಾರ್ವಜನಿಕ ಮಾಹಿತಿ ಅಧಿಕಾರಿಯ ಹೆಸರು, ಪದನಾಮ ಮತ್ತು ಇತರೇ ವಿವರಗಳು**

**4 ಃ (XVII) ನಿಗಧಿಪಡಿಸಿದ ಇತರೇ ವಿಷಯಗಳು**

**ಯಾವುದು ಇಲ್ಲ**

ಈ ಎಲ್ಲಾ ಮಾಹಿತಿಗಳು ಜಿಲ್ಲೆಯ ಅಧಿಕೃತ ವೆಬ್‌ಸೈಟ್ http://www.chickmagalur.nic.in ನಲ್ಲಿ ಲಭ್ಯವಿರುತ್ತದೆ.

**ಸಾರ್ವಜನಿಕ ಮಾಹಿತಿ ಅಧಿಕಾರಿ**

**ಶ್ರೀ ಮಂಜುನಾಥ್ ಸಿ.**

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು,
ಜಿಲ್ಲಾ ಪ0ಚಾಯಿತಿ, ಕಡೂರು
ದೂರವಾಣಿ ಸ0ಖ್ಯೆ: 221693

**ಮೇಲ್ಮನವಿ ಪ್ರಾಧಿಕಾರ**

**ಶ್ರೀಮತಿ ಪೂರ್ಣಿಮಾ ಜಿ.**

ತೋಟಗಾರಿಕೆ ಉಪನಿರ್ದೇಶಕರು
ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು
ದೂರವಾಣಿ ಸಂಖ್ಯೆ: 235334

**ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು**
**(ಜಿಲ್ಲಾ ಪಂಚಾಯಿತಿ) ಕಡೂರು**